


# ವೈದ್ಯೋ ನಾರಾಯಣೋ ಹರೀ



**ಶ್ರೀಮತಿ ಆರ್. ಸೀತಾಲಕ್ಷ್ಮಿ**
**ನಿವೃತ್ತ ಉಪಪ್ರಾಂಶುಪಾಲರು**
**ಬಸವನಗುಡಿ, ಬೆಂಗಳೂರು**

**ಶರೀರೇ ಜರ್ಜರೀ ಭೂತೆ ವ್ಯಾಧಿಗ್ರಸ್ಥೆ ಕಳೇಬರೇ।**
**ಔಷಧಂ ಜಾನ್ಹವೀ ತೋಯಂ ವೈದ್ಯೋನಾರಾಯಣೋ ಹರೀ॥**

(ಶರೀರವು ವ್ಯಾದಿಗ್ರಸ್ಥವಾಗಿ ತೊಂದರೆಗೀಡಾಗಿದ್ದಾಗ ಔಷದವು ಗಂಗಾನದಿಯಂತೆ ಪವಿತ್ರ ಹಾಗೂ ವೈದ್ಯನೇ ನಾರಾಯಣನಾಗುತ್ತಾನೆ)

ಮನುಕುಲದ ಒಳಿತಿಗಾಗಿ ಪಣತೊಟ್ಟು ಕಟಿಬದ್ಧನಾಗಿ ನಿಂತ ವೈದ್ಯನ ಸ್ಥಾನ ಶಾಶ್ವತವಾಗಿ ಉನ್ನತ ಮಟ್ಟದಲ್ಲಿದೆ ಎನ್ನುವುದಕ್ಕೆ ಈ ಮೇಲಿನ ಹೇಳಿಕೆಯೇ ಸಾಕ್ಷಿ.

ವ್ಯಕ್ತಿಯ ಸದೃಢತೆ ಅವನ ಆರೋಗ್ಯವನ್ನು ಅವಲಂಬಿಸಿದೆ. ಆರೋಗ್ಯವಂತ ಮನುಷ್ಯ ಅವನ ಯಾವ ಗುರಿಯನ್ನಾದರೂ ಸುಲಭವಾಗಿ ತಲುಪಬಲ್ಲ. ಆದ್ದರಿಂದಲೇ "ಆರೋಗ್ಯವೇ ಭಾಗ್ಯ" ಎಂಬ ಹೇಳಿಕೆ ಇದೆ.

**ಈ ಭಾಗ್ಯ ಪಡೆಯಲು ಮನುಷ್ಯ ನಿರೋಗಿಯಾಗುವುದು ಹೇಗೆ?**

ಖಾಯಿಲೆ ಬರದಂತೆ ತನ್ನ ಶರೀರವನ್ನು ನೋಡಿಕೊಳ್ಳಬೇಕು ಹಾಗೂ ರೋಗ ನಿರೋಧಕ ಕ್ರಮಗಳ ಬಗ್ಗೆ ತಿಳುವಳಿಕೆ ಪಡೆಯಬೇಕು, ಬಂದಿರುವ ರೋಗವನ್ನು ಗುರುತಿಸಿಕೊಂಡು ಪರಿಹಾರ ಕೊಂಡುಕೊಳ್ಳಬೇಕು.

ಆರೋಗ್ಯದ ಬಗ್ಗೆ ಅವೇರ್‌ನೆಸ್ ಬೆಳೆಸಿಕೊಂಡರೆ ರೋಗ ಬರುವುದನ್ನು ನಿಯಂತ್ರಿಸಬಹುದು. ಆದರೆ ರೋಗ ಬಂದರೆ, ಅಪಘಾತವಾದರೆ, ಮಾನಸಿಕ ಆಘಾತವಾದರೆ ಅಂತಹ ಸಂದರ್ಭದಲ್ಲಿ ಪರಿಹಾರ ಕಂಡುಕೊಳ್ಳಲು ವೈದ್ಯನ ಮೊರೆ ಹೋಗಲೇಬೇಕಲ್ಲವೇ?

ಮಾನವನ ಜೀವದಾತನಾದ ಮನುಷ್ಯರೂಪಿ ದೈವದ ಮೊರೆ ಹೋದರೆ ಆಪದ್ಬಾಂಧವನಾಗಿ ನಮ್ಮನ್ನು ರಕ್ಷಿಸಬಲ್ಲ ದೈವನೇ ವೈದ್ಯನೆಂದು ಮೇಲೆ ಉದ್ಧರಿಸಿದ ಶ್ಲೋಕ ಹೇಳುತ್ತದೆ.

ಕಲೆ, ವಿಜ್ಞಾನ, ವೈದ್ಯಕೀಯ, ಸಂಗೀತ, ಸಾಹಿತ್ಯ ಈ ರೀತಿ ಬಹುಮುಖ ಕೇತ್ರಗಳಲ್ಲಿ ಪ್ರಪಂಚಕ್ಕೆ ಭಾರತೀಯರ ಕೊಡುಗೆ ಅಪಾರ.

1500 ಬಿ ಸಿ ಯಲ್ಲಿದ್ದ ಸುಶ್ರುತನನ್ನು "ಶಸ್ತ್ರಚಿಕಿತ್ಸೆಯ ಪಿತಾಮಹ" ಎನ್ನುತ್ತಾರೆ. ಈತ ಸುಶ್ರುತ ಸಂಹಿತೆಯನ್ನು ಬರೆದಿದ್ದಾನೆ. ವಾಘಭಟ್ಟ ಮಹಿಳಾ ವೈದ್ಯೆ ಡಾ॥ ರೂಸಾ ಇವರುಗಳು ತಮ್ಮ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ನವಯುಗದಲ್ಲಿಯೂ ವಿವಿಧ ವಿಷಯಗಳಲ್ಲಿ ಪಾಂಡಿತ್ಯ ಪಡೆದ ವೈದ್ಯರುಗಳಿದ್ದಾರೆ. ಹೃದ್ರೋಗ ತಜ್ಞ ಡಾ॥ ಸಿ.ಎನ್ ಮಂಜುನಾಥ್, ಡಾ॥ ದೇವೀಶೆಟ್ಟಿ, ಮೂತ್ರಕೋಶ ತಜ್ಞ ಡಾ॥ ಕೆ.ಎನ್ ಶ್ರೀಧರ್ ಇನ್ನೂ ಅನೇಕರು ತಮ್ಮ ಅಮೂಲ್ಯ ಸೇವೆಯನ್ನು ನೀಡುತ್ತಿದ್ದಾರೆ.

ಗ್ರೀಕ್ ಫಿಸಿಷಿಯನ್ ಹಿಪ್ಪೋಕ್ರಾಟಸ್ (460–370ಬಿಸಿ) ಎನ್ನುವ ವೈದ್ಯನು ವೈದ್ಯರಿಗೆ ಅನುಸೂಚಿಯಾಗುವ ಪ್ರಮಾಣ ಹೇಳಿಕೆಯನ್ನು ರಚಿಸಿ "ಆಥರ್ ಆಫ್ ಡಾಕ್ಟರ್ಸ್ ಓಥ್" ಎನ್ನುವ ಹೆಗ್ಗಳಿಕೆ ಪಡೆದಿದ್ದಾನೆ.

ವೈದ್ಯರು ಅನಾದಿಕಾಲದಲ್ಲಿಯೂ ಅತ್ಯುನ್ನತ ಸ್ಥಾನಮಾನವನ್ನು ಗಳಿಸಿ ಸಮಾಜದ ಪುರಸ್ಕಾರಕ್ಕೆ ಪಾತ್ರರಾಗಿದ್ದರು. ರೋಗ ಗುರುತಿಸುವಿಕೆಯಲ್ಲಿ ತಪ್ಪಿದರೆ ಸಮಾಜ ಅವನನ್ನು ದಂಡಿಸುತ್ತಲೂ ಇತ್ತು.

ದೈವತ್ವವನ್ನು ಪಡೆದ ಈ ಮಹಾನುಭಾವರನ್ನು ಸಮಾಜವು ಸ್ಮರಿಸಿಕೊಳ್ಳುವುದು ಸೂಕ್ತವಲ್ಲವೇ ಅದಕ್ಕಾಗಿ ಪ್ರತಿವರ್ಷ ಜುಲೈ 1 ರಂದು 'ಡಾಕ್ಟರ್ಸ್ ಡೇ' ಎಂದು ಇಡೀ ಭಾರತದಾದ್ಯಂತ ಹಬ್ಬವಾಗಿ ಆಚರಿಸುತ್ತೇವೆ.

**ಈ ಸಂದರ್ಭದಲ್ಲಿ ನೂತನ ಡಾಕ್ಟರ್‌ಗಳಲ್ಲಿ ಒಂದು ವಿನಂತಿ**

ಹಿಂದಿನ ವೈದ್ಯ ರೋಗಿಯನ್ನು ತಮ್ಮ ಸರ್ವಸ್ವವೆಂದು ಭಾವಿಸಿ ಯಾವುದೇ ಅಪೇಕ್ಷೆಯಿಲ್ಲದೇ ರೋಗಿಗಳ ಮನೆಗೆ ಧಾವಿಸಿ ಆರೋಗ್ಯ ತಪಾಸಣೆ ನೀಡಿ ಸಲಹೆ ಕೊಟ್ಟು ವಿಚಾರಿಸಿ ಬರುತ್ತಿದ್ದರು. ಪ್ರಸ್ತುತ ಕಾಲದಲ್ಲಿ ಬರೀ 'ಕಾಂಚನ ಮಯಂ ಜಗತ್' ಆಗಿದೆ. ಯಾವುದೇ ಆಸ್ಪತ್ರೆಯಾಗಲಿ ಡಾಕ್ಟರ್‌ಗಳಿಗಾಗಲಿ ರೋಗಿಯ ತಪಾಸಣೆಗಿಂತ ಅವನಿಂದ ವಸೂಲಾಗುವ ಹಣವೇ ಹೆಚ್ಚು ಪ್ರಾಮುಖ್ಯವಾಗುತ್ತದೆ (ಈ ಹೇಳಿಕೆಗೆ ಎಲ್ಲ ವೈದ್ಯರೂ, ಆಸ್ಪತ್ರೆಗಳೂ ಒಳಪಡುವುದಿಲ್ಲ)

ಡಾಕ್ಟರಾದರೂ ತಾವು ವೃತ್ತಿ ಪ್ರಾರಂಭದಲ್ಲಿ ತೆಗೆದುಕೊಂಡ ಪ್ರಮಾಣಕ್ಕೆ ಅನುಗುಣವಾಗಿ ಕೆಲಸ ಮಾಡಿದರೆ ಒಳ್ಳೆಯದೆನ್ನಿಸುತ್ತದೆ. ದುಡ್ಡು ಖಂಡಿತಬೇಕು. ಆದರೆ ಬರೀ ದುಡ್ಡಿಗಾಗಿ ಬದುಕಲ್ಲ ಎನ್ನುವ ಅಂಶವನ್ನು ಪರಿಗಣಿಸಿದರೆ ಡಾಕ್ಟರ್ ವೃತ್ತಿಗೆ ಶೋಭ ತರುತ್ತದೆ.

"Health is like money, we never have a true idea of its values until we lose it" - Josh Billings.

ಶರೀರವೆಂಬ ಈ ಹೂದೋಟಕ್ಕೆ ಮನುಷ್ಯನೇ ತೋಟಗಾರ, ಡಾಕ್ಟರ್ ಎಂಬ ಗೊಬ್ಬರದ ಮೂಲಕ ಆರೋಗ್ಯವೆಂಬ ಸುಂದರ ಪುಷ್ಪವನ್ನು ಬೆಳೆಸಿ ಸಮಾಜವನ್ನು ಕಂಗೊಳಿಸುವಂತೆ ಮಾಡೋಣ.

ಈ ದಿನದ ಅಂಗವಾಗಿ ಎಲ್ಲರೂ ಗ್ರೀಟಿಂಗ್ ಕಾರ್ಡ್ ಅಥವಾ ಕಾರ್ಡ್, ಹೂಗುಚ್ಚ, ಇ–message ಗಳ ಮೂಲಕ ವೈದ್ಯರಿಗೆ ಶುಭಹಾರೈಕೆ ನೀಡಬಹುದಲ್ಲವೇ? ●

# ಗುರು ಪೂರ್ಣಿಮೆ : ಮಹತ್ವ ಏಕೆ?

■ 'ಶ್ವೇತಾದ್ರಿ'
ನಿವೃತ್ತ ಮುಖ್ಯಶಿಕ್ಷಕರು



**'ಗುರು'** ಕೇವಲ ಎರಡು ಅಕ್ಷರದ ಪದ. ಆದರೆ ತುಂಬ ಮಹತ್ವ ಪೂರ್ಣವಾದ ಅರ್ಥವನ್ನು ಹೊಂದಿದೆ. 'ಗು'ಕಾರಾಶ್ಚಾಂಧಕಾರಾಸ್ತು; 'ರು'ಕಾರಃ ತನ್ನಿರೋಧಕಮ್. ಅಂದರೆ ಗುರುವು ಶಿಷ್ಯನ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ ಜ್ಞಾನದ ಬೆಳಕನ್ನು ನೀಡುತ್ತಾನೆ.

ಶಂಕರಾಚಾರ್ಯರು ನಿಜವಾದ ಗುರು ಯಾರು ಎಂದು ಹೀಗೆ ಹೇಳುತ್ತಾರೆ. "ಅಧಿಗತತತ್ತ್ವಃ, ಶಿಷ್ಯಹಿತಾಯ ಉದ್ಯತಃ ಸತತಮ್". ಎಂದರೆ "ತತ್ತ್ವಜ್ಞಾನವನ್ನು ಚೆನ್ನಾಗಿ ತಿಳಿದುಕೊಂಡು, ಶಿಷ್ಯರ ಹಿತಕ್ಕಾಗಿಯೇ ಯಾವಾಗಲೂ ತನ್ನನ್ನು ತೊಡಗಿಸಿಕೊಂಡವನು ಗುರು". 'ವರ್ಣಮಾತ್ರಂ ಕಲಿಸಿದಾತಂ ಗುರು' ಎಂದೂ ಹೇಳಲಾಗುತ್ತದೆ. ಶಿಷ್ಯನನ್ನು ತಿದ್ದಿ ತೀಡಿ, ಜ್ಞಾನ ಶಲಾಕೆಯ ಮೂಲಕ ಅವನ ವ್ಯಕ್ತಿತ್ವವನ್ನು ರೂಪಿಸಿ, ಪ್ರತಿಭಾವಂತನನ್ನಾಗಿ ಮಾಡಿ, ಸಮಾಜಕ್ಕೆ ಶೀಲವಂತ, ಜ್ಞಾನವಂತ, ಬಹೂಪಯೋಗಿ ವ್ಯಕ್ತಿಯನ್ನು ರೂಪಿಸಿಕೊಡುವ ಮಹತ್ತರವಾದ ಜವಾಬ್ದಾರಿ ಗುರುವಿನದು. ಆದ್ದರಿಂದಲೇ ಈ ಪ್ರಪಂಚದಲ್ಲಿ ಗುರುವಿಗೆ ಸಮಾನವಾದದ್ದು ಬೇರೊಂದಿಲ್ಲ. ಗುರು ಕರುಣೆ ಅಪಾರವಾದುದು. ಮನುಷ್ಯ ದೇವ ಋಣ, ಪಿತೃ ಋಣ, ಗುರು ಋಣ– ಹೀಗೆ ಮೂರು ಋಣಗಳಿಂದ ಕೂಡಿರುತ್ತಾನೆ. ಈ ಮೂರು ಋಣಗಳನ್ನು ತೀರಿಸುವುದು ಅವನ ಕರ್ತವ್ಯವಾಗಿರುತ್ತದೆ.

**ಏಕಮೇವಾಕ್ಷರಂ ಯಸ್ತು ಗುರುಃ ಶಿಷ್ಯಂ ಪ್ರಬೋಧಯೇತ್**

**ಪೃಥಿವ್ಯಾಂ ನಾಸ್ತಿ ತದ್ದ್ರವ್ಯಂ ಯದ್ದತ್ವಾ ಚಾನೃಣೀ ಭವೇತ್**

ಈ ಉಕ್ತಿಯು "ಗುರುವು ಒಂದೇ ಒಂದು ಅಕ್ಷರವನ್ನು ಶಿಷ್ಯನಿಗೆ ಬೋಧಿಸಿದರೂ ಅಂತಹ ಗುರುವಿನಿಂದ ಋಣ ಮುಕ್ತನಾಗುವುದಕ್ಕೆ ಕೊಡಲು ಯೋಗ್ಯವಾದ ಗುರುದಕ್ಷಿಣೆ ಈ ಭೂಮಿಯಲ್ಲಿ ಇಲ್ಲ" ಎಂದು ಹೇಳುತ್ತದೆ. ಈ ಮೂಲಕ ಗುರುವಿನ ಸ್ಥಾನದ ಮಹತ್ವವನ್ನು ತಿಳಿಸುತ್ತಿದೆ. ಭೀಷ್ಮಾಚಾರ್ಯರ ಪ್ರಕಾರ ಗುರುವು ತಂದೆ – ತಾಯಿಗಳಿಗಿಂತ ಶ್ರೇಷ್ಠರು. "ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ" ಎಂದರು ದಾಸವರೇಣ್ಯ ಪುರಂದರದಾಸರು. ಸರ್ವಜ್ಞ ಕವಿ " ಗುರುವಿಂದ ಬಂಧುಗಳು, ಗುರುವಿಂದ ದೈವಗಳು, ಗುರುವಿಂದಲಿಹುದು ಪುಣ್ಯವದು, ಜಗಕೆಲ್ಲ ಗುರುವಿಂದ ಮುಕ್ತಿ ಸರ್ವಜ್ಞ" ಎಂದು ಸಾರಿದ. ನಮ್ಮ ಬದುಕನ್ನು ರೂಪಿಸುವ ಗುರುಗಳನ್ನು "ಗುರುಬ್ರಹ್ಮ, ಗುರುರ್ವಿಷ್ಣುಃ, ಗುರುರ್ದೇವೋ ಮಹೇಶ್ವರಃ, ಗುರುಸ್ಸಾಕ್ಷಾತ್ಪರಬ್ರಹ್ಮ, ತಸ್ಮೈಶ್ರೀ ಗುರವೇನಮಃ" ಎಂದು ಗೌರವಿಸಿ ಗುರುಗಳಿಗೆ ತ್ರಿಮೂರ್ತಿ ದೇವತೆಗಳ ಸ್ಥಾನವನ್ನು ನೀಡಲಾಗಿದೆ.

ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ನೂರಾರು ಗುರುಗಳು ಸಮಾಜಕ್ಕೆ ಅವಿಸ್ಮರಣೀಯ ಕಾಣಿಕೆಯನ್ನು ನೀಡಿದ್ದಾರೆ. ಜಗತ್ತಿನ ಮೊದಲ ಗುರು ಈಶ್ವರ. ಮಹರ್ಷಿ ವೇದವ್ಯಾಸರು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಗುರುಗಳೆನ್ನುವುದು ಸರ್ವವಿದಿತ. ಬ್ರಹ್ಮಜ್ಞಾನಿಗಳೂ ಆದ ವ್ಯಾಸರು ಮಹರ್ಷಿ ಪರಾಶರರು ಹಾಗೂ ಸತ್ಯವತೀ ದೇವಿಯವರ ಸುಪುತ್ರರು. ವ್ಯಾಸರು ತಮ್ಮ ಸ್ವಂತ ಶಕ್ತಿಯಿಂದ ಬ್ರಹ್ಮಜ್ಞಾನಿಯಾದವರು. ಸ್ವತಃ ಬ್ರಹ್ಮನಿಂದ ಉಗಮಿಸಿ, ಅಪೌರುಷೇಯುವೆನಿಸಿದ ಅಪಾರ ಜ್ಞಾನರಾಶಿಯನ್ನು "ಋಕ್, ಯಜುರ್, ಸಾಮ, ಅಥರ್ವ" ಎಂದು ನಾಲ್ಕು"ವೇದ" (ಭಾಗ)ಗಳಾಗಿ ವಿಭಾಗಿಸಿದ ಮಹಾಜ್ಞಾನಿ. ಅಷ್ಟೇ ಅಲ್ಲದೆ ವೇದಗಳನ್ನು 'ಸಂಹಿತ, ಬ್ರಾಹ್ಮಣ, ಅರಣ್ಯಕ" ಎಂದು ಮೂರುಭಾಗ ಮಾಡಿದ್ದಲ್ಲದೆ ಕೊನೆಯದಾದ 'ಅರಣ್ಯಕ'ದಲ್ಲಿ ವೇದಗಳ ಸಾರವಾದ 'ಉಪನಿಷತ್ತು' ಗಳನ್ನು ರಚಿಸಿದರು. ಆದ್ದರಿಂದ ವ್ಯಾಸರು ವೇದವ್ಯಾಸರಾದರು.

ವೇದ, ವೇದಾಂತಗಳು ಸಾಮಾನ್ಯ ಜನರಿಗೆ ನಿಲುಕಲಾರದು ಎಂದು ಭಾವಿಸಿದ ವೇದವ್ಯಾಸರು ಸಾಮಾನ್ಯರಿಗೂ ಜ್ಞಾನದ ಬೆಳಕನ್ನು ತಿಳಿಸಲೆಂದು 18 ಪುರಾಣಗಳನ್ನು, ಮಹಾಭಾರತ. ಭಾಗವತವನ್ನು ರಚಿಸಿದರು. ಭಾಗವತ, ಭಾರತದಲ್ಲಿ ಕಥೆಗಳ ಮೂಲಕ ಜೀವನೋದ್ದೇಶ, ಬದುಕಬೇಕಾದ ಮಾರ್ಗ, ಬಾಳಿನ ಅಂತಿಮ ಗುರಿಗಳ ತಿಳುವಳಿಕೆಯನ್ನು ನೀಡಿದರು. ವ್ಯಾಸರು ಮುಟ್ಟದ ಜ್ಞಾನರಾಶಿ ಇಲ್ಲ. ಅದಕ್ಕಾಗಿಯೇ 'ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ' ಎಂಬ ಮಾತು ಪ್ರಚಲಿತವಾಗಿರುವುದು. ಇಂತಹ ಜ್ಞಾನಶಿಖರ ವೇದವ್ಯಾಸರನ್ನು ಸ್ಮರಿಸಿ, ಅವರ ಆದರ್ಶವನ್ನು ಪಾಲಿಸುವ ಪ್ರಯತ್ನ ಮಾಡುವುದು ಶಿಕ್ಷಕವೃತ್ತಿಯನ್ನು ಸ್ವೀಕರಿಸಿರುವ ಎಲ್ಲ ಶಿಕ್ಷಕರ ಕರ್ತವ್ಯವೇ ಸರಿ. ಆದರೆ ಈ 'ಗುರುವಂದನೆ'ಗೆ ಸೂಕ್ತದಿನ ಯಾವುದು?

ಜ್ಞಾನರಾಶಿಗಳೂ, ಶ್ರೇಷ್ಠಗುರುಗಳೂ ಆದ ಮಹರ್ಷಿ ವೇದವ್ಯಾಸರು ಜನಿಸಿದ್ದು ಆಷಾಢ ಮಾಸದ ಹುಣ್ಣಿಮೆಯಂದು. ಮತ್ತೊಂದು ವಿಶೇಷವೆಂದರೆ ವ್ಯಾಸರು ಬ್ರಹ್ಮಸೂತ್ರಗಳ ರಚನೆಯನ್ನು ಪೂರ್ಣಗೊಳಿಸಿದುದು ಆಷಾಢದ ಹುಣ್ಣಿಮೆ ಎಂಬ ಉಲ್ಲೇಖವೂ ಇದೆ. ಭಾರತ ಕಂಡ ಮತ್ತೊಬ್ಬ ಶ್ರೇಷ್ಠಜ್ಞಾನಿ ಗೌತಮ ಬುದ್ಧ. ಬುದ್ಧ ತನ್ನ ಜ್ಞಾನದ ಬೆಳಕನ್ನು ಮೊದಲಿಗೆ ತನ್ನ ಐವರು ಶಿಷ್ಯರಿಗೆ ಬೋಧಿಸಿದುದೂ ಆಷಾಢದ ಹುಣ್ಣಿಮೆಯಂದೇ. ಈ ಹುಣ್ಣಿಮೆ ಅಧ್ಯಯನಕ್ಕೆ ಮೀಸಲಾದ ತಿಂಗಳು. ಗುರು ಸದಾ ಅಧ್ಯಯನ, ಅಧ್ಯಾಪನಗಳಲ್ಲಿ ನಿರತನಾಗಿದ್ದು ಸ್ವಚ್ಛ ಜ್ಞಾನವನ್ನು ಶಿಷ್ಯನಿಗೆ ನೀಡಲು ಇದು ಅತ್ಯಂತ ಸೂಕ್ತ ಕಾಲ. ಈ ಎಲ್ಲಾ ವಿಶೇಷತೆಗಳಿಂದ ಆಷಾಢ ಶುದ್ಧ ಪೌರ್ಣಿಮೆಯನ್ನು ಶತಶತಮಾನಗಳಿಂದಲೂ 'ಗುರುಪೂರ್ಣಿಮೆ'ಯಾಗಿ ಆಚರಿಸಲಾಗುತ್ತಿದೆ. ಆದರೆ ಕಾಲಕ್ರಮೇಣ ಜನಮನದಿಂದ ಕಣ್ಮರೆಯಾಗುತ್ತಾ ಬಂದುದು ವಿಪರ್ಯಾಸವೇ ಸರಿ. ಈಗ ಮತ್ತೆ ಗುರುಪೂರ್ಣಿಮೆಯ ಬಗ್ಗೆ ಜಾಗೃತಿಯನ್ನು ಮೂಡಿಸುವ ಕಾರ್ಯ ನಡೆಯುತ್ತಿದೆ. ಆಷಾಢದ ಹುಣ್ಣಿಮೆಯಂದು ವೇದವ್ಯಾಸರಿಂದ ಹಿಡಿದು ಎಲ್ಲಾ ಗುರುಗಳನ್ನು ಸ್ಮರಿಸಿ, ವಂದಿಸುವ "ಗುರುವಂದನೆ"ಯಲ್ಲಿ ಭಾಗಿಗಳಾಗಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ವರ್ಷ ಗುರು ಪೌರ್ಣಿಮೆ ಜುಲೈ 27ರಂದು. ಅಂದು ನಮ್ಮ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದಿವ್ಯ ಗುರುಪರಂಪರೆಯನ್ನು ತಿಳಿಸಿಕೊಡುವುದರ ಮೂಲಕ ಎಲ್ಲ ಗುರುವರೇಣ್ಯರನ್ನು ವಂದಿಸಿ ಗುರುವಂದನೆಯನ್ನು ಆಚರಿಸುವುದು ಸೂಕ್ತ.

●

# ಶೈಕ್ಷಣಿಕ ಆಕ್ರಮಣ

# Academic Terrorism



**ಭಾ**ರತ ಪರಕೀಯರ ಆಕ್ರಮಣವನ್ನು ಸಹಿಸಿ ಸಹಿಸಿ ಸಾಕಾಗಿದೆ. ವ್ಯಾಪಾರದ ಹೆಸರಿನಲ್ಲಿ ಆಕ್ರಮಣ, ಆಡಳಿತದ ಹೆಸಿರಿನಲ್ಲಿ ಆಕ್ರಮಣ, ಸಂಸ್ಕೃತಿಯ ಹೆಸರಿನಲ್ಲಿ ಆಕ್ರಮಣ, ಹೀಗೆ ಪರಕೀಯರು ಭಾರತದ ಮೇಲೆ ಆಕ್ರಮಣಗಳ ಸರಮಾಲೆಯನ್ನೇ ನಡೆಸಿದ್ದಾರೆ. ಇದರ ಪರಿಣಾಮವಾಗಿ ಭಾರತದಲ್ಲಿ ಪೀಳಿಗೆಯಿಂದ ಪೀಳಿಗೆಗೆ ಈ ನೆಲದ ಮೂಲಭೂತ ಆಚಾರ–ವಿಚಾರ, ನಂಬಿಕೆ, ಸಂಸ್ಕೃತಿ, ಕಲೆ, ಮಾನವೀಯ ಮೌಲ್ಯಗಳು ಎಲ್ಲವೂ ತನ್ನ ಸ್ವರೂಪವನ್ನು ಕಳೆದುಕೊಂಡು ಕೃಶವಾಗಿವೆ. ಇದೆಲ್ಲಕ್ಕೂ ಕಾರಣ ಈ ದೇಶದ ಮೇಲೆ ಪರಕೀಯರ ಆಕ್ರಮಣ ಹಾಗೂ ಅದನ್ನು ಪುಷ್ಟೀಕರಿಸಲು ಕೈಜೋಡಿಸಿ ನಿಂತಿರುವ ನಮ್ಮ ವಿದೇಶಿ ಅತಂಕಕಾರಿ ಶಕ್ತಿಗಳು. ಒಂದು ಕಡೆ ಬ್ರಿಟಿಷರ ಆಕ್ರಮಣವಾದರೆ, ಮತ್ತೊಂದು ಕಡೆ ಮುಸ್ಲಿಮರ ಆಕ್ರಮಣ. ಈ ಎರಡು ಪ್ರಮುಖ ಮತೀಯ ಆಕ್ರಮಣದಿಂದ ಮೂಲಭೂತ ಭಾರತೀಯ ಹಿಂದು ಪರಂಪರೆ ನಲುಗಿ ಹೋಗಿದೆ, ಹೋಗುತ್ತಿದೆ. ಇದು ಹೀಗೆ ಮುಂದುವರೆದರೆ ಭಾರತೀಯರಾದ ನಮ್ಮ ಮುಂದಿನ ಯುವ ಪೀಳಿಗೆ ಪ್ರಾಚೀನ ಭಾರತದ ವೈಭವವಾಗಲಿ ಶ್ರೇಷ್ಠತೆಯಾಗಲಿ, ಉದಾತ್ತ ವೈಚಾರಿಕ ಹಿನ್ನೆಲೆಯಾಗಲಿ, ವಿಶ್ವದ ಅಭಿವೃದ್ಧಿಗೆ ಭಾರತೀಯರು ನೀಡಿದ ಕೊಡುಗೆಯಾಗಲಿ ಇತ್ಯಾದಿ ವಿಚಾರಗಳು ತಿಳಿಯದೇ ಹೋಗುವ ಅಪಾಯವಿದೆ.

ಬ್ರಿಟಿಷ್ ಶಿಕ್ಷಣ ತಜ್ಞ ಲಾರ್ಡ್ ಮೆಕಾಲೆ ಭಾರತದ ವೈಭವ, ಸಮೃದ್ಧಿ, ಸಾಮಾಜಿಕ ಬಾಂಧವ್ಯ ಇವುಗಳು ಗಟ್ಟಿಯಾಗಿರುವ ಕಾರಣದಿಂದ ಭಾರತವನ್ನು ಬ್ರಿಟಿಷ್ ತೆಕ್ಕೆಗೆ ಹಾಕಿಕೊಳ್ಳುವುದು ಸುಲಭದ ಕೆಲಸವಲ್ಲ. ಈ ಸಮನ್ವಯ ಭಾರತವನ್ನು ಒಡೆಯಬೇಕಾದರೆ ಇರುವ ಒಂದೇ ಅಸ್ತ್ರ ಶಿಕ್ಷಣ. ಅದರ ಹದವನ್ನು ಕೆಡಿಸಿದರೆ ಮಾತ್ರ ಈ ದೇಶವನ್ನು ಸುಲಭವಾಗಿ ಪಡೆಯಬಹುದು ಎಂಬ ವರದಿಯನ್ನು ನೀಡಿದ ಪರಿಣಾಮವಾಗಿ ಭಾರತ ತನ್ನ ಗುರುಕುಲ ವಿದ್ಯಾಭ್ಯಾಸ ಪದ್ಧತಿಯನ್ನು ಸಂಪೂರ್ಣ ನಿಷ್ಕ್ರಿಯಗೊಳಿಸಿ, ಇಂದಿನ ಕ್ಲಾಸ್ ರೂಮ್ ಮಾದರಿಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಮಾಡಲಾಯಿತು. ಮೊದಲಿಗೆ ಆಂಗ್ಲಭಾಷೆಯನ್ನು ಹೇರಲಾಯಿತು. ಇದರಿಂದ ಪರಕೀಯ ಲೆಕ್ಕಾಚಾರಗಳ ನಡುವೆ ಮಾತೃಭಾಷೆಯ ಭಾವನೆಗಳು, ನಮ್ಮ ಮಕ್ಕಳು ಸೊರಗಬೇಕಾಯಿತು.

ನಮ್ಮ ದೇಶದ ಮಕ್ಕಳಿಗೆ ನಮ್ಮ ದೇಶದ ಶ್ರೇಷ್ಠತೆಯನ್ನು ಪರಿಚಯಿಸುವ ಬದಲು ವಿದೇಶಿಯರ ಸಾಧನೆಗಳನ್ನು, ಅಲ್ಲಿನ ಶ್ರೇಷ್ಠತೆಯನ್ನು, ಅಲ್ಲಿನ ಕಾವ್ಯ–ನಾಟಕಗಳನ್ನು, ಅಲ್ಲಿನ ಜನರ ಮೇಧಾವಿತನದ ಪರಿಚಯ, ಜೊತೆ ಜೊತೆಯಲ್ಲಿಯೇ ಭಾರತದ ಬಡತನದ ವೈಭವೀಕರಣ, ದಾಸ್ಯದ ಪರಿಚಯ ಮುಂತಾದ ವಿಚಾರಗಳನ್ನು ಎಳೆಯ ಮಕ್ಕಳ ಮನಸ್ಸಿನಲ್ಲಿ ತುಂಬುವ ಪ್ರವೃತ್ತಿ ಪ್ರಾರಂಭಿಸಿ, ದೇಶದ ಬಗ್ಗೆ ಯುವ ಪೀಳಿಗೆಯಲ್ಲಿ ಶ್ರದ್ಧೆ ಬರುವ ಬದಲು ಹೇಸಿಗೆ ಬರುವ ಹಾಗೆ ಮಾಡಿದರು ಮತ್ತು ಇದರಿಂದ ಆಲೋಚನೆಗಳಲ್ಲಿ ಬದಲಾವಣೆ ಬರಲು ಪ್ರಾರಂಭವಾಯಿತು, ವೇಷಭೂಷಣಗಳಲ್ಲಿ ವಿದೇಶಿ ಅನುಕರಣೆ ಶುರುವಾಯಿತು, ದೇಶೀಯ ಶ್ರದ್ಧೆಭಿಗಳನ್ನು ಪ್ರಶ್ನಿಸುವ ಮನೋಭಾವ ಹುಟ್ಟುಹಾಕುವ ಪ್ರವೃತ್ತಿ ಶುರುವಾಯಿತು. ವಿದೇಶಿ ಐಶಾರಾಮಿ ಜೀವನದ ಕಡೆ ಯುವ ಮನಸ್ಸುಗಳು ಹೊರಳುವಂತಾಯಿತು. ನಾವೆಲ್ಲರೂ ಒಂದು ಎಂಬ ಭಾವದಿಂದ ನಾನು ಎಂಬ Self-Centered ನಂತಹ ಸಂಕುಚಿತ ಚಿಂತನೆಗೆ ಬಂದು ತಲುಪಿದೆವು. ಇವೆಲ್ಲವೂ ಶಿಕ್ಷಣದಲ್ಲಿ ಆದ ಬದಲಾವಣೆಯಿಂದ ಅದ ಪರಿಣಾಮಗಳು. ಬದುಕು ದುಡ್ಡು ಮಾಡಲು ಹಾಗೂ ಜೀವನ ಮಜಾ ಮಾಡಲು ಎಂಬ ಧೋರಣೆಗೆ ಭಾರತೀಯರ ಮಾನಸಿಕತೆ ಬಂದು ನಿಲ್ಲುವಂತಾಯಿತು.

ಇದನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರವೃತ್ತಿ ಪ್ರಜಾಪ್ರಭುತ್ವ ಸರ್ಕಾರಗಳು ಮುಂದುವರೆಸಿದವು. ಪ್ರಾಥಮಿಕ, ಪ್ರೌಢ ಶಿಕ್ಷಣದಲ್ಲಿ ವಿದೇಶಿ ವಿಚಾರಧಾರೆಗಳನ್ನು ಪಠ್ಯಪುಸ್ತಕಗಳಲ್ಲಿ ತುರುಕುವ ಪ್ರವೃತ್ತಿ ವ್ಯವಸ್ಥಿತವಾಗಿ ನಿರ್ಮಾಣವಾಗುತ್ತಾ ಬಂತು. ದೇಶದ ಇತಿಹಾಸವನ್ನು ತಿರುಚಿದ ಪಾಠಗಳನ್ನು ನಮ್ಮ ಮಕ್ಕಳು ಅನಿವಾರ್ಯವಾಗಿ ಓದುವ ಹಾಗೆ ನಮ್ಮಿಂದಲೇ ಆಯ್ಕೆಯಾದ ಸರ್ಕಾರಗಳು ಮಾಡತೊಡಗಿದವು. ಕರ್ನಾಟಕದ ಮಟ್ಟಿಗೆ ಈ ಕೆಲಸ ವ್ಯವಸ್ಥಿತವಾಗಿ ಆಗತೊಡಗಿತು. ಅದೇ ಸಮಯದಲ್ಲಿ ವಿದೇಶಿಯರು ಭಾರತೀಯರ ಮೇಲೆ, ದೇಶಿಯ ಪರಂಪರೆಗೆ ಮಾಡಿದ ಆಘಾತ, ಅಕ್ರಮ ದಾಳಿ, ದೇಶಿಯ ರಾಜರುಗಳ ನಡುವೆ ತಂದೊಡ್ಡಿದ ವೈಷಮ್ಯ, ಮಾಡಿದ ಬಲಾತ್ಕಾರ ಮತಾಂತರದ,

ಇಲ್ಲಿನ ಸಂಪತ್ತನ್ನು ದೋಚಿದ ಸತ್ಯ ಕಥೆ ಇತ್ಯಾದಿಗಳನ್ನು ಸಹ ತಿಳಿಸಿದ್ದರೆ ಒಪ್ಪಬಹುದಿತ್ತು. ಆದರೆ ಅದು ಹಾಗಾಗಲಿಲ್ಲ.

ಮಹಾಭಾರತದಲ್ಲಿ ಬರುವ ಶ್ಲೋಕ ಇಲ್ಲಿ ಬಹಳ ಪ್ರಸ್ತುತವಾಗಿದೆ. ಇದು ಹೇಳುವುದು ಮೊದಲಿಗೆ ಗುರುನಿಂದ ಶಿಷ್ಯನು ತನ್ನ ಪ್ರಾಚೀನರು, ಅವರ ಕೊಡುಗೆ, ಅವರ ಪರಂಪರೆ, ಅದರಿಂದ ಅದ ಸಾಮಾಜಿಕ–ಆರ್ಥಿಕ ಸುಧಾರಣೆಗಳು, ದೇಶೀಯ ಶಿಕ್ಷಣ, ಅದರ ಆಳ–ಅಗಲ ಅವುಗಳ ಅಧ್ಯಯನಮಾಡಿ ಪರಿಣತಿಯನ್ನು ಹೊಂದಿ ನಂತರ ತಾನೇ ಆಸಕ್ತಿಯಿರುವ ವಿಚಾರಗಳನ್ನು ಕಲಿಯಬಹುದು ಎಂಬುದು. ಹಾಗಾದಾಗ ಎಳೆಯ ಮನಸ್ಸು ತನ್ನ ವಿಚಾರ, ತನ್ನ ಪ್ರಾಚೀನರ ಬಗ್ಗೆ ಶ್ರದ್ಧೆ, ಅದರಲ್ಲಿ ಪ್ರಾವೀಣ್ಯ ಪಡೆದು ಅದರಿಂದ ವಿಚಲಿತನಾಗುವುದಿಲ್ಲ. ಅದು ಅವನಿಗೆ ಶ್ರೇಷ್ಠವೆಂದು ಅವನ ಜೀವಮಾನವಿಡೀ ಅನ್ನಿಸುತ್ತದೆ.

ಪುಟ 6 ಕ್ಕೆ ➤

ಗುರುವಿನ ಕೃಪೆ ದೊರೆತವನಿಗೆ ಮಾರ್ಗ ಕಾಣಿಸುವುದು. – ಸ್ವಾಮಿ ಬ್ರಹ್ಮಾನಂದ

➢ ಪುಟ 5 ರಿಂದ.....

**ಆಚಾರ್ಯಾತ್ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ ।**
**ಕಾಲೇನ ಪಾದಮಾದತ್ತೇ ಪಾದಂ ಸ ಬ್ರಹ್ಮಚಾರಿಭಿಃ ॥**

ವಿದ್ಯಾರ್ಥಿಯು ತನಗೆ ಬೇಕಾದ ವಸ್ತುವಿಚಾರವನ್ನು ಮೂರನೇ ನಾಲ್ಕನೇ ಹಂತದಲ್ಲಿ ಅತನೇ ಕಲಿಯಬೇಕು. ಇದು ಅತನ ಮೂಲ ಸಂಸ್ಕೃತಿಗೆ ಧಕ್ಕೆ ತರುವುದಿಲ್ಲ. ಹಾಗಾಗಿ ಗುರುವಿನಿಂದ ನಮ್ಮ ಮಕ್ಕಳಿಗೆ ನಮ್ಮ ಪ್ರಾಚೀನ ಪರಂಪರೆ ಕುರಿತು ಪ್ರಾಥಮಿಕ, ಪ್ರೌಢ ಹಂತದಲ್ಲಿ ಅದರ ಉಗಮ, ಶ್ರೇಷ್ಠತೆ, ಇತಿಹಾಸ, ಅದರ ಒಳ–ಹೊರಗುಗಳು, ಅದರಲ್ಲಿ ಅಡಕವಾಗಿರುವ ಶ್ರೇಷ್ಠ ಪುರುಷರು, ರಾಜಮನೆತನ, ಧಾರ್ಮಿಕ ಶ್ರದ್ಧೆಗಳು, ತತ್ವ–ಸಿದಾಟಭಿಂತಗಳು ಇತ್ಯಾದಿ ಕುರಿತಾಗಿ ಮೊದಲಿಗೆ ವಿದ್ಯಾರ್ಥಿಯು ಪರಿಣಿತಿಯನ್ನು ಪಡೆಯಬೇಕು. ಇದರಿಂದ ಆ ವಿದ್ಯಾರ್ಥಿಗೆ ತನ್ನ ಪೂರ್ವಜರ ಇತಿಹಾಸ, ಶ್ರೇಷ್ಠ ಚಿಂತನೆ, ತತ್ವ–ಸಿದ್ಧಾಂತದ ಮಹತ್ವ, ಅದರ ಬಗ್ಗೆ ಗೌರವ, ಅದನ್ನು ಮೈಗೂಡಿಸಿಕೊಂಡು ಆಚರಿಸುವ ಮನೋಭಾವ, ಅದರಲ್ಲಿ ಪರಿಣತಿ, ಅದಕ್ಕೆ ತನ್ನದೇ ಆದ ನೂತನ ಕೊಡುಗೆ ಕೊಡುವ ಪ್ರಬುದ್ಧತೆ ಇತ್ಯಾದಿ ಮಟ್ಟಕ್ಕೆ ಏರುವ ಹಾಗಾಗಬೇಕು. ನಂತರ ತಾನೇ ಇಷ್ಟಪಟ್ಟು ಬೇರೆ ವಿಚಾರಗಳ ಅಧ್ಯಯನ, ಹೊರಗಿನ ವಿಚಾರಕ್ಕೂ ತಮ್ಮ ವಿಚಾರಕ್ಕೂ ಇರುವ ಭಿನ್ನತೆ ಅದರಿಂದಾಗಬಹುದಾದ ಪರಿಣಾಮಗಳು ಹೀಗೆ ಅವನೇ ಕಲಿಯವುದು ಎರಡನೇ ಹಂತ, ಆದರೆ ಅದು ಪದ ಮಟ್ಟದಲ್ಲಿ ಅಗಬೇಕು. ಇದೇ ಮುಂದುವರೆದು ತಾನೇ ಸಮಾಜದಲ್ಲಿ ನಡೆಯುವ ವಿದ್ಯಮಾನಗಳ ಜೊತೆಗೆ ಸಾಗುವ ಸಲುವಾಗಿ ಅಧ್ಯಯನ ಮುಂದುವರೆಸಬಹುದು. ಆದರೆ ಪ್ರಾಚೀನ ಆಚಾರ–ವಿಚಾರ, ತತ್ವ–ಸಿದ್ಧಾಂತಗಳ ಜೊತೆ ಯಾವುದೇ ರಾಜಿಗೆ ಒಳಪಡದೇ ಅಧ್ಯಯನದ ಸಲುವಾಗಿ ಮಾತ್ರ ತಿಳಿದುಕೊಳ್ಳವ ಕಲಿಕಾ ಪ್ರವೃತ್ತಿಯನ್ನು ಹೊಂದಬಹುದು. ಇದು ಮೂರು ಮತ್ತು ನಾಲ್ಕನೇ ಹಂತದಲ್ಲಿ ನಡೆಯಬಹುದು. ಅದನ್ನು ಬಿಟ್ಟು ಪ್ರಾಥಮಿಕ–ಪ್ರೌಢ ಶಿಕ್ಷಕದ ಪಠ್ಯಪುಸ್ತಕದಲ್ಲಿ ಅನ್ಯಮತೀಯ (ಕ್ರಿಶ್ಚಿಯನ್ ಮತ್ತು ಇಸ್ಲಾಂ) ವಿಚಾರಗಳ ಬಗ್ಗೆ ಪಾಠಗಳು, ಅದನ್ನು ಆಳವಾಗಿ ಅಧ್ಯಯನದ ವಿಷಯವಾಗಿ ಪುಸ್ತಕಗಳಲ್ಲಿ ಅಳವಡಿಸುವುದು, ಅದನ್ನು ಕುರಿತು ಯೋಜನಾ ಕೆಲಸವೆಂದು ಚರ್ಚ್‌ಗೆ ಹೋಗಿ, ಮಸೀದಿಗೆ ಹೋಗಿ ಎಂದು ವಿದ್ಯಾರ್ಥಿಗಳನ್ನು ಒತ್ತಾಯಿಸುವುದು, ಸಮಾನತೆಯ ಹೆಸರಿನಲ್ಲಿ ವೇಷಭೂಷಣದಲ್ಲಿ ಬದಲಾವಣೆಯನ್ನು ಕಡ್ಡಾಯಗೊಳಿಸುವುದು, ವಿದ್ಯಾರ್ಥಿಗಳ ಮೇಲೆ ಸಾಂಸ್ಕೃತಿಕ ಆಕ್ರಮಣ ಮಾಡುವುದು ಅದನ್ನು Progress thinking ಎಂದು ಹೇಳಿ ಮಕ್ಕಳಲ್ಲಿ ದೇಶಿಯ ವಿಚಾರಗಳಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳುವಂತೆ ಮಾಡುವುದು, ಇದು ಒಂದು ರೀತಿಯಲ್ಲಿ ಶೈಕ್ಷಣಿಕ ಭಯೋತ್ಪಾದನೆ. ಮಕ್ಕಳಲ್ಲಿ ಗೊಂದಲವನ್ನು ಉಂಟುಮಾಡಿ ಅವರನ್ನು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ದಿವಾಳಿಗಳನ್ನಾಗಿಸುವ ಹುನ್ನಾರ ನಡೆಯುತ್ತಿದೆ.

ಉದಾಹರಣೆಗೆ 9ನೇ ತರಗತಿಯ ಸಮಾಜ ಜ್ಞಾನದ ಮೊದಲ ಪಾಠ ಕ್ರೈಸ್ತ ಮತ್ತು ಇಸ್ಲಾಂ ಮತದ ಸಂಸ್ಥಾಪಕರ ಪರಿಚಯ, ಅದರಲ್ಲಿ ಮಕ್ಕಳನ್ನು ಚರ್ಚ್, ಮಸೀದಿಗೆ ಭೇಟಿ ನೀಡುವಂತೆ ಪ್ರಶ್ನೆಗಳನ್ನು ನೀಡಿ ಮಕ್ಕಳ ಭಾವನೆಯ ಮೇಲೆ ಚೆಲ್ಲಾಟವಾಡುವ ಹುನ್ನಾರ. ಮೇಲ್ನೋಟಕ್ಕೆ ಇದು ಕಲಿಕಾ ದೃಷ್ಟಿಯಿಂದ ಒಳ್ಳೆಯದು ಎಂದು ಕಂಡುಬರುವಂತೆ ಚಿತ್ರಿಸಿ, ಒಳಗೆ ನಮ್ಮ ಯುವಪೀಳಿಗೆಯನ್ನು ಧಾರ್ಮಿಕವಾಗಿ ಅನಾಥರನ್ನಾಗಿಸುವ ಮೋಸದಾಟ. ಇಂತಹ ಪಾಠಗಳನ್ನು ಆಳವಡಿಸುವ ಸಮಿತಿಯ ಅಧ್ಯಕ್ಷರಿಗೆ ದೇಗುಲಗಳ ಬಗ್ಗೆ ಅಲ್ಲಿನ ವಾಸ್ತುಶಿಲ್ಪದ ಬಗ್ಗೆ, ಇರುವ ವೈಚಾರಿಕ ವಿಚಾರಗಳ ಬಗ್ಗೆ, ಅದರಲ್ಲಿ ಅಡಗಿರುವ Engineering ಬಗ್ಗೆ, ಅದರಲ್ಲಿ ಅಡಗಿರುವ ಕಲಾವೈಭವ ಇತ್ಯಾದಿಗಳ ಬಗ್ಗೆ ಕಲಿತು ಬರಲು ಹೇಳುವ ಪಾಠಗಳೇಕಿಲ್ಲ, ಇದರ ಕಡೆಗೆ ವಿದ್ಯಾರ್ಥಿಗಳನ್ನು ಏಕೆ ಪ್ರೇರೇಪಿಸುತ್ತಿಲ್ಲ? ಕಾರಣ ಅದು ಬೇಕಿಲ್ಲ. ಈ ರೀತಿ ಅಲ್ಪಸಂಖ್ಯಾತ ಅನ್ಯಮತೀಯರ ವಿಚಾರಧಾರೆಗೆ ಸೊಪ್ಪು ಹಾಕುವ ಪಾಠಗಳನ್ನು ಅಳವಡಿಸುವುದು ಯಾವ ರೀತಿಯಲ್ಲಿ ನ್ಯಾಯ, ಇದಕ್ಕೆ ಬಹುಸಂಖ್ಯಾತ ಹಿಂದುಗಳಿಂದ ಆಯ್ಕೆಯಾದ ಸರ್ಕಾರಗಳು ಯಾವ ಉತ್ತರವನ್ನು ನೀಡುತ್ತವೆ. ನಮ್ಮ ಶಿಕ್ಷಣಸಚಿವರಿಗೆ, ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರುಗಳಿಗೆ ಈ ದೇಶೀಯ ವಿಚಾರಗಳ ಮೇಲೆ ಶ್ರದ್ಧೆ ಇಲ್ಲದ ಬರಗೂರು ರಾಮಚಂದ್ರಪ್ಪನಂಥವರು ಪಠ್ಯಪುಸ್ತಕ ರಚನಾ ಮಂಡಲಿಯ ಅಧ್ಯಕ್ಷರು ಯಾವುದೇ ಭಾರತೀಯ ಸಾಂಸ್ಕೃತಿಕ, ಧಾರ್ಮಿಕ ವಿಚಾರದಲ್ಲಿ ಶ್ರದ್ಧೆ ಇಲ್ಲದ ವ್ಯಕ್ತಿ, ಇಂತಹ ಮಹಾನುಭಾವ ಹೇಗೆ ದೇಶೀಯ ವಿಚಾರವನ್ನು ಪಠ್ಯಪುಸ್ತಕದಲ್ಲಿ ಸೇರಿಸಲು ಸಾಧ್ಯ? ಹಾಗಾಗಿ ಇದು ಗಂಭೀರವಾದ ವಿಚಾರ. ವಿದ್ಯಾರ್ಥಿಗಳ ತಂದೆ–ತಾಯಿಗಳು ಇದನ್ನು ಪ್ರಶ್ನೆಮಾಡಬೇಕು. ಇಲ್ಲವಾದರೆ ಮಕ್ಕಳು ನಮ್ಮ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಿಚಾರದಿಂದ, ಭಾರತೀಯ ಆಚಾರ–ವಿಚಾರದಿಂದ, ತತ್ವ–ಸಿದ್ಧಾಂತದಿಂದ ದೂರಹೋಗಿ ನಮ್ಮ ಕೈಗೆ ಸಿಗದ ಮಟ್ಟಕ್ಕೆ ಮುಟ್ಟುವ ಅಪಾಯವಿದೆ. ದಯಮಾಡಿ ಇಂತಹ ಶೈಕ್ಷಣಿಕ ಆಕ್ರಮಣಗಳು ನಮ್ಮ ಮಕ್ಕಳ ಮೇಲೆ ಅಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ತಂದೆ–ತಾಯಿಗಳ ಜವಾಬ್ದಾರಿ. ಜೊತೆಗೆ ನಾವೇ ಆಯ್ಕೆಮಾಡಿದ ಸರ್ಕಾರಗಳು ಇಂತಹಾ ಅಡ್ಡದಾರಿ ಹಿಡಿಯದಂತೆ ನೋಡಿಕೊಳ್ಳಬೇಕು. ಇದರಿಂದ ದೂರ ಸರಿಯಬೇಡಿ. ಇದನ್ನು ಕೆಲವು ಬುದ್ಧಿಜೀವಿ ಸಂಘಟನೆಗಳು ಕೋಮುವಾದ ಎಂದು ಬೊಬ್ಬೆಹೊಡೆಯಬಹುದು. ಆದರೆ ಇಂತಹ ಕೋಮುವಾದ ಬೇಕು ಹಾಗೂ ಅದು ಅನಿವಾರ್ಯ.

**ಕೃಪೆ : ವಿಕ್ರಮ**

## ಅತಿ ಕಿರಿಯ ಎಂಜಿನಿಯರ್ ತೆಲಂಗಾಣದ 16 ವರ್ಷದ ಬಾಲಕಿ



ವಯಸ್ಸು 10 ಇರುವಾಗ 10 ನೇ ತರಗತಿ ಪಾಸ್ ಆಗಿದ್ದ ಕಾಶಿಭಟ್ ಸಂಹಿತಾ ಈಗ ತೆಲಂಗಾಣದ ಅತೀ ಕಿರಿಯ ಮಹಿಳಾ ಎಂಜಿನಿಯರ್ ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ. ಎಲೆಕ್ಟ್ರಿಕಲ್ ಆಂಡ್ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್‌ನಲ್ಲಿ ಪದವಿ ಪೂರೈಸಿದ್ದಾಳೆ. 3ನೇ ವಯಸ್ಸಿನಲ್ಲಿ ಎಲ್ಲಾ ರಾಷ್ಟ್ರಗಳ ರಾಜಧಾನಿಯನ್ನು ಪಟಪಟ ಹೇಳುತ್ತಿದ್ದ ಆಕೆ 10ನೇ ವಯಸ್ಸಿನಲ್ಲಿ 10ನೇ ಕ್ಲಾಸ್ ಪರೀಕ್ಷೆ ಬರೆದು 8.8 ಜಿಪಿಎ ಗಳಿಸಿದ್ದಳು. ಪಿಯುಸಿ ಹಂತದಲ್ಲಿ ಶೇ 89 ರಷ್ಟು ಅಂಕ ಗಳಿಸಿದ್ದಳು. ಈಗ 16ನೇ ವಯಸ್ಸಲ್ಲಿ ಎಂಜಿನಿಯರ್ ಪದವಿ ಪೂರೈಸಿದ್ದಾಳೆ. ಆಕೆಗಾಗಿ ತೆಲಂಗಾಣ ಸರ್ಕಾರ ನಿಯಮವನ್ನು ಸಡಿಲಿಸಿ ಎಂಜಿನಿಯರಿಂಗ್ ಪದವಿ ಪಡೆಯಲು ಅವಕಾಶ ಮಾಡಿಕೊಟ್ಟಿತ್ತು. ಅವಕಾಶವನ್ನು ಅಸ್ತ್ರವನ್ನಾಗಿ ಬಳಸಿ ಚಿಕ್ಕ ವಯಸ್ಸಲ್ಲಿ ಅತಿದೊಡ್ಡ ಸಾಧನೆಯನ್ನು ಆಕೆ ಮಾಡಿದ್ದಾಳೆ.

ಮನವಿ

# ಶಿಕ್ಷಕರ ವಿಶೇಷ ವೇತನ ವಿಸ್ತರಣೆಗೆ ಮನವಿ

ಪತ್ರದ ಸಂಖ್ಯೆ: 125/2018–19 ದಿನಾಂಕ:05/07/2018

ಗೆ,

**ಮಾನ್ಯ ಮುಖ್ಯಮಂತ್ರಿಗಳು,**

ಕರ್ನಾಟಕ ಸರ್ಕಾರ ವಿಧಾನ ಸೌಧ, ಬೆಂಗಳೂರು.

ಮೂಲಕ, ಜಿಲ್ಲಾಧಿಕಾರಿಗಳು /ತಾಲ್ಲೂಕು ದಂಡಾಧಿಕಾರಿಗಳು,

**ಮಾನ್ಯರೆ,**

**ವಿಷಯ : 2008 ರ ನಂತರ ನೇಮಕ/ಬಡ್ತಿ ಹೊಂದಿದ ಶಿಕ್ಷಕರಿಗೆ ವಿಶೇಷ ವೇತನ ವಿಸ್ತರಿಸಲು ಮತ್ತು ಶಿಕ್ಷಕರ ವರ್ಗಾವಣೆಯನ್ನು ಪ್ರಾರಂಭಿಸುವ ಬಗ್ಗೆ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಬೆಂಗಳೂರು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ದಿನಾಂಕ : 05–07–2018 ರಂದು ಈ ಕೆಳಗಿನ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ಮನವಿ ಸಲ್ಲಿಸುತ್ತಿದ್ದೇವೆ.

*** 2008 ರ ನಂತರ ನೇಮಕ/ಬಡ್ತಿ ಹೊಂದಿದ ಶಿಕ್ಷಕರಿಗೆ ವಿಶೇಷ ವೇತನ ವಿಸ್ತರಿಸುವ ಕುರಿತು:–**

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕಳೆದ ಅನೇಕ ವರ್ಷಗಳಿಂದ 2008 ರ ನಂತರ ನೇಮಕ/ಬಡ್ತಿ ಹೊಂದಿದ ಶಿಕ್ಷಕರಿಗೆ ವಿಶೇಷ ವೇತನ ವಿಸ್ತರಿಸುವ ಬಗ್ಗೆ ಹೋರಾಟ ಮಾಡುತ್ತಾ ಬಂದಿದೆ. ಈಗ ರಾಜ್ಯದಲ್ಲಿ ಆರನೇ ವೇತನಾಯೋಗದ ವರದಿ ಜಾರಿಯಾಗಿರುವುದರಿಂದ ಶಿಕ್ಷಕರಿಗೆ ಒಂದು ವೇತನ ಬಡ್ತಿ ನಷ್ಟವಾಗುತ್ತಿದೆ. ಇದರಿಂದ ಶಿಕ್ಷಕರ ಸೇವಾ ಅವದಿಯಲ್ಲಿ ಆರ್ಥಿಕ ಬಹುದೊಡ್ಡ ನಷ್ಟವಾಗುತ್ತದೆ. ಜೊತೆಗೆ ಶಿಕ್ಷಕರ ಮದ್ಯದಲ್ಲಿ ಅಸಮಾನತೆ ಹುಟ್ಟಿಕೊಳ್ಳುತ್ತದೆ. ಅದಕ್ಕಾಗಿ ಗಮನ ಹರಿಸಿ ಎಲ್ಲಾ ಶಿಕ್ಷಕರಿಗೂ ವಿಶೇಷ ವೇತನವನ್ನು ವಿಸ್ತರಿಸಲು ಶಿಕ್ಷಕ ಸಂಘವು ಒತ್ತಾಯಿಸುತ್ತದೆ.

*** ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪ್ರಾರಂಬಿಸುವುದು :–**

ಕಳೆದ 3 ವರ್ಷಗಳಿಂದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ನಿಂತು ಹೋಗಿದೆ ಅನಾರೋಗ್ಯ ಪೀಡಿತ ಪತಿ ಪತ್ನಿಗಳು ಮತ್ತು ಪಾಲಕರ ಪೋಷಣೆಯಲ್ಲಿ ಶಿಕ್ಷಕರು ತೊಂದರೆ ಅನುಭವಿಸುತ್ತಾ ಕಳೆದ ಒಂದು ವರ್ಷದಿಂದ ಅರ್ಜಿಹಾಕಿ ಕಾಯುತ್ತಿದ್ದಾರೆ ಆದ್ದರಿಂದ ವರ್ಗಾವಣೆ ಪ್ರಕ್ರಿಯೆಯನ್ನು ನಿಯಮಾನುಸಾರ ಪ್ರಾರಂಭಿಸಬೇಕೆಂದು ಶಿಕ್ಷಕ ಸಂಘವು ಒತ್ತಾಯಿಸುತ್ತದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ, **ಚಿದಾನಂದ ಪಾಟೀಲ್,** ರಾಜ್ಯ ಪ್ರಧಾನ ಕಾರ್ಯದರ್ಶಿ

## 12ನೇ ವಯಸ್ಸಿಗೆ ಗ್ರ್ಯಾಂಡ್ ಮಾಸ್ಟರ್ ಆದ ತಮಿಳುನಾಡಿನ ಆರ್. ಪ್ರಜ್ಞಾನಂದ್



ಸಾಧನೆಗೆ ವಯಸ್ಸಿನ ಮಿತಿಯಿಲ್ಲ ಎಂಬುದನ್ನು ಹಲವಾರು ಸಾಧಕರು ತೋರಿಸಿಕೊಟ್ಟಿದ್ದಾರೆ. ಅವರ ಸಾಲಿಗೆ ಹೊಸ ಸೇರ್ಪಡೆ ತಮಿಳುನಾಡಿನ ಮಾಸ್ಟರ್ ಬಿರುದು ಪಡೆದು ಕೊಂಡಿದ್ದಾರೆ. ಚೆಸ್ ಕ್ರೀಡಾಪಟುವಾದ ಈತ ಇಟಲಿಯಲ್ಲಿ ನಡೆದ ಗ್ರೆಡಿನ್ ಓಪನ್ 8 ಮತ್ತು 4ನೇ ರೌಂಡ್‌ನಲ್ಲಿ ಮರೋನಿ ಲುಕಾ ಅವರನ್ನು ಸೋಲಿಸಿ ಗ್ರ್ಯಾಂಡ್ ಮಾಸ್ಟರ್ ಬಿರುದನ್ನು ತನ್ನದಾಗಿಸಿಕೊಂಡಿದ್ದಾನೆ. ಈ ಮೂಲಕ ದೇಶದ ಅತಿ ಕಿರಿಯ ಮತ್ತು ಜಗತ್ತಿನ ಎರಡನೇ ಅತಿ ಕಿರಿಯ ಗ್ರ್ಯಾಂಡ್ ಮಾಸ್ಟರ್ ಎನಿಸಿಕೊಂಡಿದ್ದಾನೆ. 2016 ರಲ್ಲಿ ಅಂದರೆ ತನ್ನ 10 ವಯಸ್ಸಿನಲ್ಲಿ ಈತ ಇಂಟರ್ ನ್ಯಾಷನಲ್ ಮಾಸ್ಟರ್ ಆಗಿ ಹೊರಹೊಮ್ಮಿದ್ದಾನೆ. ವಿಶ್ವನಾಥನ್ ಆನಂದ್ ಅವರನ್ನು ರೋಲ್ ಮಾಡೆಲ್ ಆಗಿರಿಸಿಕೊಂಡಿರುವ ಈತನ ಮುಂದಿನ ಟಾರ್ಗೆಟ್ ವಿಶ್ವಚಾಂಪಿಯನ್ ಆಗಿ ಹೊರಹೊಮ್ಮುವುದು. ಇದಕ್ಕಾಗಿ ಆತ ಸಿದ್ಧತೆಯನ್ನು ಆರಂಭಿಸಿಕೊಂಡಿದ್ದಾನೆ. ●

## ಭಾರತದ ಮೊದಲ ಮಹಿಳಾ ಫೈಟರ್ ಪೈಲೆಟ್ ಮೇಘನಾ ಶಾನುಭೋಗ್



ಚಿಕ್ಕಮಗಳೂರಿನ ಮೇಘನಾ ಶಾನುಭೋಗ್ ಭಾರತೀಯ ವಾಯುಸೇವೆಯ ಯುದ್ಧ ವಿಮಾನಗಳನ್ನು ಹಾರಿಸಲಿರುವ ದಕ್ಷಿಣ ಭಾರತದ ಮೊದಲ ಮಹಿಳೆಯಾಗಿ ಹೊರಹೊಮ್ಮಿದ್ದಾರೆ. ವಾಯುಸೇನೆಯ ಫ್ಲೈಯಿಂಗ್ ಆಫೀಸರ್ ರ್‍ಯಾಂಕ್ ಪಡೆದಿರುವ ಇವರು, ಬೀದರ್‌ನ ವಾಯುಸೇನಾ ಅಕಾಡೆಮಿಯಲ್ಲಿ ಇಂಗ್ಲೆಂಡ್ ಯುದ್ಧ ವಿಮಾನ 'ಹಾಕ್' ನಲ್ಲಿ ಹಾರಾಟ ತರಬೇತಿಯನ್ನು ಪಡೆಯಲಿದ್ದಾರೆ. ಭಾರತೀಯ ವಾಯುಸೇನೆ ಆರನೇ ಮಹಿಳಾ ಫೈಟರ್ ಪೈಲೆಟ್ ಆಗಿರುವ 23 ವರ್ಷದ ಮೇಘನಾ, ಈಗಾಗಲೇ ಆಂದ್ರಪ್ರದೇಶದ ದಂಡಿಗಲ್ ಏರ್‌ಪೋರ್ಟ್ ಅಕಾಡಮಿಯಲ್ಲಿ ಒಂದೂವರೆ ವರ್ಷ 'ಫೈಟರ್ ಫ್ಲೈಟ್' ತರಬೇತಿಯನ್ನು ಪಡೆದುಕೊಂಡಿದ್ದಾರೆ. ●

ಭೂರಮೆ

# ಗುರುಕುಲಗಳಲ್ಲಿ ಮಾತೃಸ್ವರೂಪೀ ಋಷಿಕೆಯರು

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು



**ಆ**ಷಾಡಮಾಸದ ಹುಣ್ಣಿಮೆ ಗುರುಪರಂಪರೆಯನ್ನು ವಂದಿಸುವ, ಗೌರವಿಸುವ ಪವಿತ್ರದಿನ. ಅದೇ ವ್ಯಾಸಪೂರ್ಣಿಮೆ. 'ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ ಲೋಕಗುರುವೆನಿಸಿರುವ, ಲೋಕವಂದ್ಯರಾದ ವ್ಯಾಸಮಹರ್ಷಿಗಳನ್ನು ಕುರಿತು ಈ ಮಾತಿದೆ. ಏಕೆಂದರೆ ಅವರು ವಿವರಿಸದೆ ಬಿಟ್ಟಿರುವುದು ಮತ್ತಾವುದೂ ಇಲ್ಲ ಎಂಬುದೇ ಇದರ ಅರ್ಥ. ಅದಕ್ಕೆ ಅವರು ಹುಟ್ಟಿದ ದಿನವನ್ನು ಲೋಕಗುರುವಿನ ಗೌರವಾರ್ಥ ಗುರುಪೂರ್ಣಿಯೆಂದೂ, ವ್ಯಾಸಪೂರ್ಣಿಮೆಯೆಂದೂ ಕರೆದು ಇಡೀ ಗುರು ಪರಂಪರೆಯನ್ನು ವಂದಿಸುವ ಆಚರಣೆ ನಡೆದು ಬಂದಿದೆ.

ಈ 'ಗುರು' ಎಂಬ ಪರಿಕಲ್ಪನೆ ಹಾಗೂ 'ಗುರು–ಶಿಷ್ಯ' ಪರಂಪರೆಯ ಮಹತ್ತ್ವ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳಲ್ಲಿ ಪ್ರಮುಖವಾದುದು. ಇದರ ಬಗ್ಗೆ ಉಪನಿಷತ್ತುಗಳಲ್ಲಿಯೂ ಪ್ರಸ್ತಾಪಿಸಲಾಗಿದೆ. ವೇದಕಾಲೀನ ಶಿಕ್ಷಣದಲ್ಲಂತೂ ಗುರುಕುಲ ವ್ಯವಸ್ಥೆಯ ವಿವರಗಳು ಸೋದಾಹರಣ ಸಹಿತವಾಗಿ ತಿಳಿದುಬರುತ್ತದೆ.

**ಗುರುಬ್ರಹ್ಮ ಗುರುರ್ವಿಷ್ಣುಃ ಗುರುದೇವೋ ಮಹೇಶ್ವರಃ**
**ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ।**

ಮೇಲಿನ ಸಾಲುಗಳಲ್ಲಿ ತ್ರಿಮೂರ್ತಿಗಳಿಗೆ ಗುರುವನ್ನು ಸಮೀಕರಿಸಿದ್ದರೂ ಈ 'ಗುರು' ಸ್ಥಾನವನ್ನು ಮೊದಲಿಗೆ ಪಡೆದುಕೊಳ್ಳುವವಳೇ 'ತಾಯಿ'. ತನ್ನ ಜೀವನವನ್ನೇ ಒತ್ತೆಯಿಟ್ಟು ಮಗುವಿಗೆ ಜನ್ಮ ನೀಡುವ 'ತಾಯಿ', ಎಂಬ ಅದ್ಭುತ ಶಕ್ತಿಯನ್ನು ಅದಕ್ಕೇ ಮೊದಲಿಗೇ ಸ್ಮರಿಸುವುದು. 'ಮಾತೃದೇವೋಭವ' ಎಂದು. ಈಕೆ ಮಗುವಿಗೆ ಸರ್ವಸ್ವವೂ ಆಗಿರುತ್ತಾಳೆ. ತಾಯಿಯಾಗಿ, ಗುರುವಾಗಿ, ಗೆಳತಿಯಾಗಿ, ಹಿತೈಷಿಯಾಗಿ ಮಗುವಿನ ಮನಸ್ಸನ್ನರಿತು ಸ್ಪಂಧಿಸುತ್ತ ಎಂದಿಗೂ ಒಳಿತನ್ನೇ ಬಯಸುವ ಪ್ರೇರಕ ಶಕ್ತಿಯಾಗಿರುತ್ತಾಳೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮಗು ತನ್ನ ವ್ಯಕ್ತಿತ್ವವನ್ನು ಆರೋಗ್ಯಕರವಾಗಿ ವಿಕಾಸಗೊಳಿಸಿಕೊಳ್ಳಲು ಅಗತ್ಯವಾದ ಭದ್ರ ಬುನಾದಿಯನ್ನು ನಿರ್ಮಿಸಿಕೊಡುವುದು ತಾಯಿಯೇ. ಹಾಗಾಗಿ ಶಿಕ್ಷಣ, ಕಲಿಕೆ ಎಂಬ ಕ್ರಿಯೆಯು ಮಗುವಿಗೆ ಆರಂಭವಾಗುವುದು ಈ ತಾಯಿಯಿಂದಲೇ ಅಂತಲೇ ಆಕೆಯೇ 'ಮೊದಲ ಗುರು'. ಆಕೆ ಮಗುವಿಗೆ ಶೈಶವಾವಸ್ಥೆಯಿಂದಲೇ ಉತ್ತಮ ಸಂಸ್ಕಾರಗಳನ್ನು ತುಂಬುತ್ತ ಪ್ರತಿ ಹಂತದಲ್ಲಿಯೂ ಗುರುವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಲೇ ಇರುತ್ತಾಳೆ. ಏಕೆಂದರೆ 'ಶಿಕ್ಷಣ' ಎನ್ನುವುದು ವ್ಯಕ್ತಿಯು ತನ್ನ ಮತ್ತು ತನ್ಮೂಲಕ ಸಮಾಜದ ಹಿತಕ್ಕಾಗಿ ಪಡೆದುಕೊಳ್ಳುವ ಸಾಂಸ್ಕೃತಿಕ, ಸಾಮಾಜಿಕ, ಆಧ್ಯಾತ್ಮಿಕ ಪ್ರಗತಿಗಾಮಿಯಾದ ಹೆಚ್ಚಿನ ಅರಿವಾಗಿರುತ್ತದೆ. ಕುಟುಂಬದಲ್ಲಿ ತಾಯಿಯಿಂದ ಆರಂಭವಾಗುವ ಈ ಕ್ರಿಯೆ (ಜ್ಞಾನ ಪ್ರದಾನ) ಪರಿವಾರದ ಇತರ ಸದಸ್ಯರ ಆತ್ಮೀಯ ಸಹಕಾರದ, ಅನುಬಂಧದೊಂದಿಗೇ ನಡೆಯುತ್ತದೆ. ಇದು ತನ್ನ ಮುಂದಿನ ಹಂತದ ಬೆಳವಣಿಗೆಯನ್ನು ಕಾಣುವುದು 'ಗುರುಕುಲದಲ್ಲಿ'.

ವೇದಕಾಲೀನ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಿದಾಗ ಶಿಕ್ಷಣದ ಒಂದು ಅಚ್ಚುಕಟ್ಟಾದ ಕ್ರಮವನ್ನು ಅನುಸರಿಸಿರುವುದು ಕಂಡುಬರುತ್ತದೆ. ಗುರುಕುಲವೆಂಬ ಎರಡನೇ ಮನೆಯಲ್ಲಿ ಮಗುವಿನ ಕಲಿಕೆಯು ಸುಸೂತ್ರವಾಗಿ ನಡೆಯಲು ಅಗತ್ಯವಾದ ಪ್ರೀತಿ, ವಾತ್ಸಲ್ಯದ ವಾತಾವರಣವನ್ನು ನಿರ್ಮಿಸುವುದರಲ್ಲಿ ಗುರು ಮತ್ತು ಗುರುಪತ್ನಿಯ ಜವಾಬ್ದಾರಿ ಮಹತ್ತ್ವದ್ದಾಗಿರುತ್ತಿತ್ತು. ಏಕೆಂದರೆ ತಾಯಿ, ತಂದೆಯ ಸ್ಥಾನವನ್ನು ತುಂಬುತ್ತಿದ್ದವರು ಅವರಿಬ್ಬರೇ ಆಗಿರುತ್ತಿದ್ದರು. ತಾಯಿಯ ಸ್ಥಾನವನ್ನು ತುಂಬುವುದರೊಂದಿಗೆ ವಿದ್ಯಾದಾನ ಮಾಡುತ್ತಿದ್ದ ಋಷಿಕೆಯರೂ ಇರುತ್ತಿದ್ದರು. ಇಪ್ಪತ್ತೇಳು ಮಂದಿ ಋಷಿಕೆಯರು ಮಂತ್ರದ್ರಷ್ಟಾರರೂ ಆಗಿದ್ದರೆಂದು ಋಗ್ವೇದದಲ್ಲಿ ಹೇಳಲಾಗಿದೆ. ಮಹರ್ಷಿಯಾಜ್ಞವಲ್ಕ್ಯರ ಇಬ್ಬು ಪತ್ನಿಯರಲ್ಲಿ ಮೈತ್ರೇಯಿ ಎಂಬಾಕೆ ಬ್ರಹ್ಮವಾದಿನಿಯಾಗಿದ್ದು ಉಪನಿಷತ್ತಿನ ಕೆಲವು ಮಂತ್ರಗಳನ್ನು ರಚಿಸಿದ್ದಳೆಂದೂ, ಅಗಸ್ತ್ಯಮಹರ್ಷಿಯ ಪತ್ನಿ ಲೋಪಾಮುದ್ರಾ ಎಂಬಾಕೆ ಮಂತ್ರದ್ರಷ್ಟಾರಳಾಗಿದ್ದಳೆಂದೂ ತಿಳಿದುಬರುತ್ತದೆ. ಇವರೆಲ್ಲರೂ ಗುರುಕುಲದಲ್ಲಿ ಗುರುವಾಗಿಯೂ ಕಾರ್ಯನಿರ್ವಹಿಸುತ್ತಿದ್ದವರೇ ಆಗಿದ್ದರು. ಗಾರ್ಗಿ ಎಂಬ ಬ್ರಹ್ಮವಾದಿನಿ ತತ್ತ್ವಜ್ಞಾನದಲ್ಲಿ ಅದ್ಭುತವಾದ ಪಾಂಡಿತ್ಯವನ್ನು ಹೊಂದಿದ್ದು ಹಲವಾರು ಬೌದ್ಧಿಕ ಚರ್ಚೆಗಳಲ್ಲಿ ಪಾಲ್ಗೊಂಡು ತನ್ನ ಪ್ರತಿಭೆಯನ್ನು ನಿರೂಪಿಸಿ ಶ್ರೇಷ್ಠಸ್ಥಾನವನ್ನು ಪಡೆದವಳಾಗಿದ್ದಳು. ರಾಜರ್ಷಿ ಜನಕ ಮಹಾರಾಜನು ಏರ್ಪಡಿಸಿದ್ದ ಬ್ರಹ್ಮಯಜ್ಞದ ಸಂದರ್ಭದಲ್ಲಿ ಮಹರ್ಷಿ ಯಾಜ್ಞವಲ್ಕ್ಯರೊಂದಿಗೆ ತತ್ತ್ವಶಾಸ್ತ್ರದ ಬಗೆಗೆ ಚರ್ಚೆಯಲ್ಲಿ ಭಾಗವಹಿಸಿ ತನ್ನ ಬ್ರಹ್ಮವಿದ್ಯೆಯ ಪ್ರದರ್ಶನದಿಂದ ಎಲ್ಲರ ಗೌರವಕ್ಕೆ ಆಕೆ ಪಾತ್ರಳಾದಳೆಂದು ತಿಳಿದುಬರುತ್ತದೆ. ಸುಲಭಾ, ಪ್ರಾತಿತೇಯ, ವಾಡಾವ ಎಂಬ ಋಷಿಕೆಯರು ಕೂಡ ತಮ್ಮ ಪಾಂಡಿತ್ಯದಿಂದ ಶಿಕ್ಷಣ ಕ್ಷೇತ್ರಕ್ಕೆ ಹಲವು ರೀತಿಗಳಲ್ಲಿ ಕೊಡುಗೆ ನೀಡಿದವರಾಗಿದ್ದರು. ಗುರುಕುಲಗಳಲ್ಲಿ ವಿದ್ಯಾಭ್ಯಾಸಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳಿಗೆ ಇವರೆಲ್ಲರ ಮಾರ್ಗದರ್ಶನ ಹಲವಾರು ರೀತಿಗಳಲ್ಲಿ ಲಭ್ಯವಾಗುತ್ತಿತ್ತೆಂದೂ ತಿಳಿದುಬರುತ್ತದೆ.

ಇವರೆಲ್ಲ ನೀಡುತ್ತಿದ್ದ ಶಿಕ್ಷಣವನ್ನು ಎರಡು ಭಾಗಗಳಾಗಿ ವಿಂಗಡಿಸಿದರೆ ಒಂದು ಹತ್ತಾರು ವಿಷಯಗಳಿಗೆ ಸಂಬಂಧಿಸಿದಂತೆ ಪಡೆದುಕೊಳ್ಳುವ ಶೈಕ್ಷಣಿಕ ವಿಚಾರಗಳನ್ನು ಒಳಗೊಂಡಿದ್ದರೆ, ಮತ್ತೊಂದು,

ಪುಟ 9 ಕ್ಕೆ ➢

➢ ಪುಟ 8 ರಿಂದ.....

ವ್ಯಕ್ತಿಯು ಉತ್ತಮ ಚಾರಿತ್ರ್ಯವನ್ನು ಹೊಂದಲು ನೆರವಾಗುವ ಮಾರ್ಗದರ್ಶೀ ಸೂತ್ರಗಳನ್ನು ಒಳಗೊಂಡಿರುತ್ತಿತ್ತು. ಗುರುಕುಲದಲ್ಲಿ ಇರುತ್ತಿದ್ದ ಹೆಣ್ಣುಮಕ್ಕಳು ಹೀಗೆ ಗುರುವಿನ ಸ್ಥಾನದಲ್ಲಿದ್ದುಕೊಂಡು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಯಲ್ಲಿ ಕಾಳಜಿ ವಹಿಸುತ್ತಿದ್ದರು. ಸಪ್ತ ಋಷಿಗಳಲ್ಲಿ ಒಬ್ಬರಿಂದ ಹಿರಿಯರಾದ ವಸಿಷ್ಠ ಮಹರ್ಷಿಗಳ ಪತ್ನಿ ಅರುಂಧತಿಯ ಪಾತಿವ್ರತ್ಯ, ಜ್ಞಾನ, ಗುಣ, ಸೌಶೀಲ್ಯಗಳ ಬಗ್ಗೆ ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಸಪ್ತಋಷಿಗಳಿಗೆ ಸಮಾನವಾದ ಪವಿತ್ರವಾದ ಗೌರವದ ಸ್ಥಾನವನ್ನೇ ಈಕೆಗೂ ನೀಡಲಾಗಿದೆ. ವೇದ, ಪುರಾಣಗಳಲ್ಲಿ ಈಕೆಯನ್ನು ಪರಿಶುದ್ಧತೆಯ ಮೂರ್ತರೂಪವೆಂದೇ ವರ್ಣಿಸಲಾಗಿದೆ. ಗೃಹಸ್ಥಾಶ್ರಮ ಧರ್ಮ'ದಲ್ಲಿನ ದಾಂಪತ್ಯ ಜೀವನದ ಯಶಸ್ಸಿಗೆ ಈಕೆಯನ್ನು ಆರಾಧಿಸುವುದು, ಪೂಜಿಸುವುದು ಅತ್ಯಗತ್ಯವೆಂಬ ಭಾವನೆ ಹಿಂದೂ ಸಂಪ್ರದಾಯಗಳಲ್ಲಿ ಬೇರೂರಿದ್ದು ಅದು ಈಗಲೂ ಪ್ರಚಲಿತವಿದೆ. ಅಷ್ಟೇ ಅಲ್ಲ, ಅರುಂಧತಿಯು ಆಶ್ರಮದಲ್ಲಿ ಸಪ್ತಋಷಿಗಳಿಗೂ ವೈರಾಗ್ಯಕ್ಕೆ ಸಂಬಂಧಿಸಿದಂತೆ ಬೋಧನೆ ಮಾಡುತ್ತಿದ್ದಳೆಂದೂ ಮಹಾಭಾರತದಲ್ಲಿ ವರ್ಣಿಸಿದ್ದಾರೆ. ಅತ್ರಿ ಮಹರ್ಷಿಗಳ ಪತ್ನಿಯಾದ ಮಹಾಸತಿ ಅನಸೂಯೆ ತನ್ನ ಪಾತಿವ್ರತ್ಯದ ಹಿರಿಮೆಯಿಂದ ತ್ರಿಮೂರ್ತಿಗಳನ್ನೂ ಮೆಚ್ಚಿಸಿ, ಅವರು ಒಡ್ಡಿದ ಪರೀಕ್ಷೆಯಲ್ಲಿ ಜಯಿಸಿ ಅವರನ್ನೇ ತನ್ನ ಪಾತಿವ್ರತ್ಯ ಬಲದಿಂದ ಶಿಶುಗಳನ್ನಾಗಿ ಪರಿವರ್ತಿಸಿ ಮಾತೃಪ್ರೇಮವನ್ನು ಧಾರೆಯೆರೆದ ಕಥೆ ಲೋಕಪ್ರಸಿದ್ಧ. ಅಂತಹ ಪೂಜ್ಯ ಸ್ತ್ರೀ ತನ್ನಾಶ್ರಮದ ಬಾಗಿಲಿಗೆ ರಾಮಲಕ್ಷ್ಮಣರೊಂದಿಗೆ ವನವಾಸಕ್ಕೆ ತೆರಳುವಾಗ ಬಂದ ಸೀತಾದೇವಿಯನ್ನು ಪುತ್ರಿಯೆಂದು ಮಾತೃವಾತ್ಸಲ್ಯದಿಂದ ಉಪಚರಿಸಿದ್ದು, ಆಕೆಗೆ 'ನಾರಿಧರ್ಮ'ವನ್ನು ಉಪದೇಶಿಸಿದ್ದು ಕೂಡ ರಾಮಾಣಯಣದಲ್ಲಿ ಉಕ್ತವಾಗಿದೆ. ಈ ಎಲ್ಲ ಉದಾಹರಣೆಗಳು ಋಷ್ಯಾಶ್ರಮಗಳಲ್ಲಿರುತ್ತಿದ್ದ ಪ್ರೀತಿಯ ವಾತಾವರಣವನ್ನು ಋಷಿಮುನಿಗಳ ಪತ್ನಿಯರು ತಮ್ಮಾಶ್ರಮಕ್ಕೆ ಬರುತ್ತಿದ್ದ ಅತಿಥಿಗಳು, ವಿದ್ಯಾರ್ಥಿಗಳು ಎಲ್ಲರೊಂದಿಗೆ ತೋರುತ್ತಿದ್ದ ವಾತ್ಸಲ್ಯದ ಆತಿಥ್ಯವನ್ನು, ಉಪಚಾರವನ್ನು ಮತ್ತು ಆ ಮೂಲಕ ಅಲ್ಲೆಲ್ಲ ಕಂಡುಬರುತ್ತಿದ್ದ ಅನುಕರಣೀಯವೆನಿಸುತ್ತಿದ್ದ ನಡೆನುಡಿಯ ಬಗ್ಗೆ ಸ್ಪಷ್ಟವಾದ ಅರಿವನ್ನೂ ನೀಡುತ್ತದೆ. ಆತಿಥ್ಯ ಧರ್ಮದೊಂದಿಗೆ ಆದರ್ಶ ವ್ಯಕ್ತಿತ್ವಕ್ಕೆ, ಸಚ್ಚಾರಿತ್ರ್ಯಕ್ಕೆ ನಿಚ್ಚಳ ಉದಾಹರಣೆಯಾಗಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕ ಅಂಶಗಳನ್ನು ತನ್ಮೂಲಕ ಬೋಧಿಸುತ್ತಿದ್ದುದು ಅರಿವಾಗುತ್ತದೆ.

ಗುರುಕುಲದಲ್ಲಿ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಾಗ ಕಲಿಯುತ್ತಿದ್ದ ಅಳವಡಿಸಿಕೊಳ್ಳುತ್ತಿದ್ದ ಪ್ರತಿಯೊಂದು ನಡೆನುಡಿಯು ಗುರು ಮತ್ತು ಗುರುಪತ್ನಿಯು ನೀಡುತ್ತಿದ್ದ ಉಪದೇಶದ ಫಲವಾಗಿರುತ್ತಿತ್ತು. ಸಾಮರಸ್ಯದ, ಸೌಹಾರ್ದದ, ಸ್ವಾವಲಂಬೀತನದ, ಆತ್ಮವಿಶ್ವಾಸದ, ಮೌಲಿಕ ಜೀವನದ ಮಹತ್ತ್ವದ, ನೈತಿಕ ಪ್ರಜ್ಞೆಯ ಅವಶ್ಯಕತೆಯ ವಿಚಾರಗಳು ಬದುಕಿನ ಸಾರ್ಥಕತೆಗೆ ಅಗತ್ಯವೆಂಬ ಪಾಠ ವಿದ್ಯಾರ್ಥಿಗಳಿಗೆ ಲಭಿಸುತ್ತಿತ್ತು. ಜೊತೆಗೇ ಗುರು–ಶಿಷ್ಯ ಸಂಬಂಧದಲ್ಲಿನ ಪ್ರೀತಿಯ ಅನುಬಂಧವೂ ಕೂಡ ದೀರ್ಘಕಾಲೀನವಾಗಿಯೇ ಉಳಿದು ಅದರ ಪಾವಿತ್ರ್ಯವನ್ನು ಹೆಚ್ಚಿಸುತ್ತಿತ್ತು. ಗುರುಪರಂಪರೆಯನ್ನು ಶಿಷ್ಯರು ಗೌರವಿಸುವ, ಪೂಜಿಸುವ ಸತ್ಸಂಪ್ರದಾಯಕ್ಕೆ ಈ ಎಲ್ಲ ಅಂಶಗಳು ಪ್ರೇರಣೆ. 'ಗುರುವಿನ ಗುಲಾಮನಾಗುವತನಕ ದೊರಕದಣ್ಣ ಮುಕುತಿ' ಎಂದು ದಾಸರು ಹಾಡಿರುವುದು ಗುರುವಿನ ಈ ಶ್ರೇಷ್ಠತೆಯನ್ನು ಅರಿತದ್ದರಿಂದಲೇ ತಾನೇ?

**ಗುರುಭ್ಯೋನಮಃ** ●

## ಚಿಕ್ಕದೊಂದು ಕಥೆ

# ಪ್ರಾರ್ಥನೆಯೊಂದೇ ಹೃದಯ ಪರಿಶುದ್ಧಿಗೆ ರಹದಾರಿ



ಹಿಮಾಲಯದ ತಪ್ಪಲಿನ ಒಂದು ಹಳ್ಳಿ. ಹಳ್ಳಿಯ ಮನೆಯೊಂದರಲ್ಲಿ ಒಬ್ಬ ಅಜ್ಜ. ಆತ ಪ್ರತಿದಿನ ಭಗವದ್ಗೀತೆಯನ್ನು ಓದುತ್ತಿದ್ದ. ಹೂವುಗಳನ್ನು ಕೊಯ್ದು ದೇವರ ಪೂಜೆಯನ್ನು ಮಾಡುತ್ತಿದ್ದ, ಆತನ ಮೊಮ್ಮಗನೂ ಅಜ್ಜನನ್ನೇ ಅನುಕರಿಸುವನು. ಹೂಕೊಯ್ದು ಪೂಜೆ ಮಾಡುವನು. ಭಗವದ್ಗೀತೆ ಪುಸ್ತಕ ಬಿಡಿಸಿ ಕುಳಿತುಕೊಳ್ಳುವನು, ಪ್ರಾರ್ಥನೆಯನ್ನು ಮಾಡುವನು.

ಕಾಲವು ಸಂದಿತು. ಮೊಮ್ಮಗ ಸ್ವಲ್ಪ ದೊಡ್ಡವನಾದನು. ಆತನ ಮನಸ್ಸಿನಲ್ಲಿ ಸಂಶಯ ಹುಟ್ಟಿತು. ಪ್ರತಿದಿನ ಪೂಜೆ ಮಾಡುವುದು, ಭಗವದ್ಗೀತೆ ಓದುವುದರಿಂದ ಏನು ಪ್ರಯೋಜನ? ಯಾವ ಬದಲಾವಣೆಯನ್ನೂ ಕಾಣಲಿಲ್ಲವಲ್ಲಾ ಎಂದು ಅಜ್ಜನಲ್ಲಿ ಈ ಪ್ರಶ್ನೆಯನಿಟ್ಟ.

ಅಜ್ಜ ಮಾರುತ್ತರವೀಯಲಿಲ್ಲ. ಅಜ್ಜನೆಂದ 'ನೋಡು ಮಗೂ ಅಟ್ಟದಲ್ಲಿ ಇದ್ದಲು ತುಂಬಿಸಿದ ಬುಟ್ಟಿಯೊಂದಿದೆ. ಅದನ್ನು ತೆಗೆದುಕೊಂಡು ಹೋಗಿ ಕೆಳಗಿನ ನದಿಯಿಂದ ನೀರು ತಾ' ಎಂದ. ಮೊಮ್ಮಗ ಇದ್ದಲಿನ ಧೂಳಿನಿಂದ ಕಪ್ಪಗಾಗಿದ್ದ ಬುಟ್ಟಿಯನ್ನು ಹಿಡಿದುಕೊಂಡು ನದಿಯೆಡೆಗೆ ನಡೆದ. ನೀರನ್ನು ತುಂಬಿ ಮನೆಯೆಡೆಗೆ ಬಂದ. ಆದರೆ ಬುಟ್ಟಿಯ ತೂತುಗಳಲ್ಲಿ ನೀರು ಹರಿದು ಹೋಗಿ ಮನೆಮುಟ್ಟುವಾಗ ಖಾಲಿಯಾಗುತ್ತಿತ್ತು. ಹಲವಾರು ಬಾರಿ ಪ್ರಯತ್ನಿಸಿದ ಆದರೆ ನೀರು ಖಾಲಿಯಾಗುತ್ತಿತ್ತೇ ವಿನಾ ನೀರು ತರಲಾಗಲಿಲ್ಲ.

ಕೊನೆಗೆ ಮನೆಗೆ ಬಂದ ಮೊಮ್ಮಗ ಅಜ್ಜನಲ್ಲಿ ಈ ಬುಟ್ಟಿ ತೂತಾಗಿದೆ. ಎಷ್ಟು ಬಾರಿ ನೀರು ತಂದರೂ ಪ್ರಯೋಜನವಿಲ್ಲ. ಈ ಪ್ರಯೋಜನವಿಲ್ಲದ ಕಾರ್ಯವನ್ನೇಕೆ ಮಾಡಬೇಕು ಎಂದ. ಆಗ ಅಜ್ಜ ಹೀಗೆಂದರು 'ಮಗೂ, ಮೊದಲೊಮ್ಮೆ ಬುಟ್ಟಿಯನ್ನು ನೋಡು, ಹೇಗಿತ್ತು ಬುಟ್ಟಿ? ಇದ್ದಲಿನಿಂದ ಕಪ್ಪಗಿತ್ತು. ಈಗ ಸತತ ನೀರು ಹರಿದು ಬುಟ್ಟಿಯಲ್ಲಿನ ಕೊಳೆಗಳು ಹೋಗಿ ಶುದ್ಧವಾಗಿದೆ. ಪ್ರಾರ್ಥನೆಯೂ ಹಾಗೆಯೇ ಮೇಲ್ನೋಟಕ್ಕೆ ಪ್ರಯೋಜನ ಕಂಡುಬರದಿದ್ದರೂ ನಿರಂತರ ಪ್ರಾರ್ಥನೆಯೆಂಬ ನೀರು ಕೆಟ್ಟಚಿಂತನೆ, ಪಾಪಗಳಿಂದ ತುಂಬಿರುವ ಮನಸ್ಸನ್ನು ಶುದ್ಧಗೊಳಿಸುತ್ತಾ ಹೋಗುತ್ತದೆ. ಇದು ನಿರಂತರ ಕ್ರಿಯೆ. ಪ್ರಾರ್ಥನೆಯಿಂದೇನು ಪ್ರಯೋಜನ ಎಂಬುದಕ್ಕೆ ಉತ್ತರ ಸಿಕ್ಕಿತೇ? ಪ್ರಾರ್ಥನೆಯೊಂದೇ ಹೃದಯ ಪರಿಶುದ್ಧಿಗೆ ರಹದಾರಿ. ●

# ವನಮಹೋತ್ಸವ

ವಿಜಯಲಕ್ಷ್ಮಿ ಬಿ.
ಸಹಶಿಕ್ಷಕರು, ಕನಕಪುರ

ಹಸಿರು ಪ್ರಕೃತಿ ನಮಗೆ ನೀಡಿರುವ ಹರುಷದ ಉಸಿರು. ನಾವು ನೆಲೆಸಿರುವುದು, ಬದುಕಿರುವುದು, ನಗುವುದು–ನಲಿಯುವುದು ಎಲ್ಲವೂ ಪ್ರಕೃತಿಯ ಹಸಿರಿನ ನಡುವೆಯೇ. ನಾವು ಅಷ್ಟೇ ಅಲ್ಲ, ಸಕಲ ಜೀವಕೋಟಿಗಳೂ ಉಳಿದಿರುವುದು ಪ್ರಕೃತಿಯ ಆಸರೆಯಲ್ಲಿಯೇ. ಜೀವನದಲ್ಲಿ ಈ ಹಸಿರು ತುಂಬಿರುವ ಗಿಡ– ಮರಗಳು ಹಸಿರಿನ ಹರುಷವನ್ನೂ ವರುಷ ಪೂರ್ತಿ ಜಗತ್ತಿನ ಜೀವಕೋಟಿಗೆ ನೀಡುತ್ತಿರುತ್ತದೆ.

ಹಾಗಾಗಿ ಭಾರತ ಸಸ್ಯ ಶ್ಯಾಮಲ ಭೂಮಿ, 'ವಂದೇ ಮಾತರಂ' ಗೀತೆಯಲ್ಲಿ ಬಂಕಿಮ ಚಂದ್ರರು "ಸಸ್ಯ ಶ್ಯಾಮಲಾಂ ಮಾತರಂ" ಎಂದೇ ಹಾಡಿ ಹೊಗಳಿದ್ದಾರೆ.

ಈ ಆಚರಣೆಯು ಕೇವಲ ದಿನಪತ್ರಿಕೆ, ವೃತ್ತಪತ್ರಿಕೆ ಮತ್ತು ಪುಸ್ತಕಗಳಲ್ಲಿ ಮಾತ್ರ ಸೀಮಿತಗೊಂಡಂತಿದೆ. ಇದನ್ನು ಜನಸಮುದಾಯ, ಶಿಕ್ಷಕ ಸಮುದಾಯ ಎಲ್ಲರೂ ಸೇರಿ ದಿನಾಚರಣೆಯ ದಿನ ಮಾತ್ರ ಆಚರಿಸದೆ ಪ್ರತಿ ದಿನವು ಅದರ ಬಗ್ಗೆ ಗಮನ ಹರಿಸುವುದು, ಬೆಳೆಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ.

ಗಿಡಗಳನ್ನು ನೆಡುವ ಪದ್ಧತಿ, ಮರಗಳನ್ನು ಬೆಳೆಸುವ ಪದ್ಧತಿ ಅನಾದಿ ಕಾಲದಿಂದಲೂ ರೂಢಿಯಲ್ಲಿ ಬಂದಿರುವ ಒಂದು ಸಾಂಪ್ರದಾಯಕ ಪದ್ಧತಿ. ಈ ಸಂದರ್ಭದಲ್ಲಿ ಪ್ರಮುಖವಾಗಿ ಇಂದಿನ ದಿನಗಳಲ್ಲಿ ಶಿಕ್ಷಕರು ಸ್ವಲ್ಪ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಮಕ್ಕಳಲ್ಲಿ ಪರಿಸರಪ್ರಜ್ಞೆಯನ್ನು ಮೂಡಿಸಿ ಈ ಮುಖಾಂತರ ಪರಿಸರದ ಉಳಿವಿಗೆ ಶ್ರಮಿಸಬೇಕು.

ಮಕ್ಕಳಿಗೆ ಪರಿಸರದ ಸ್ವಚ್ಛತೆಯಿಂದ ಮತ್ತು ಪರಿಸರದ ಉಳಿವಿನಿಂದಾಗುವ ಅನುಕೂಲಗಳ ಬಗ್ಗೆ ಅರಿವನ್ನು ಮೂಡಿಸಬೇಕು. ಪ್ರಮುಖವಾಗಿ ನಮ್ಮ ಎಲ್ಲಾ ಕಾರ್ಯಚಟುವಟಿಕೆಗಳು ಹೇಗೆ ಪರಿಸರದ ಮೇಲೆ ಅವಲಂಭಿತವಾಗಿರುತ್ತದೆ ಎಂಬುದರ ಬಗ್ಗೆ ತಿಳಿಸಿಕೊಡಬೇಕು. ಪ್ರಮುಖವಾಗಿ

1. ಉತ್ತಮವಾದ ಗಾಳಿ (ಆಮ್ಲಜನಕ) ಪಡೆಯಲು.
2. ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣ ಕಡಿಮೆ ಮಾಡಲು.
3. ಮನುಷ್ಯನ ಸೌಂದರ್ಯೋಪಾಸಕ ಮೌಲ್ಯ ಹೆಚ್ಚಿಸಲು.
4. ಮಾನವ ರೀತಿಯಲ್ಲಿಯೇ ಇತರೇ ಪ್ರಾಣಿ ಸಂಕುಲಗಳ ಆವಾಸವನ್ನು ಹೆಚ್ಚಿಸಲು.

ಹೀಗೆ ಹಲವಾರು ರೀತಿಯಲ್ಲಿ ಪರಿಸರದಿಂದ ನಮಗೆ ಅನುಕೂಲವಾಗಲಿದೆ.

**"ಮರವಿದ್ದರೆ ಮಳೆ ಇಲ್ಲದಿದ್ದರೆ ಬರಿದಾಗುವುದು ಇಳೆ"**

ಸರ್ಕಾರ ಈಗೀಗ ವನಮಹೋತ್ಸವದ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ಆಸಕ್ತಿಯಿಂದ ವಹಿಸುವ ಕ್ರಮಕ್ಕೆ ಗಮನ ನೀಡಿದೆ. ಸರ್ಕಾರ ಒಂದರಿಂದಲೇ ಎಲ್ಲವನ್ನು ಸಾಧಿಸಲು ಸಾಧ್ಯವಿಲ್ಲ. ಒಂದೇ ಕೈಯಿಂದ ಚಪ್ಪಾಳೆ ಹೊಡೆಯಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರಕ್ಕೆ ಮತ್ತೊಂದು ಕೈಯಾಗಿ ಜೋಡಣೆಯಾಗುವುದು ನಮ್ಮ ಶಿಕ್ಷಕರು. ಏಕೆಂದರೆ ಶಿಕ್ಷಕರು ಮನಸ್ಸು ಮಾಡಿದರೆ ಸಮಾಜವನ್ನೇ ಸಂಪೂರ್ಣವಾಗಿ ಬದಲಾಯಿಸುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ.

ಶಿಕ್ಷಕರು ಪ್ರಮುಖವಾಗಿ ಮಕ್ಕಳಲ್ಲಿ ಪರಿಸರದ ಪ್ರಜ್ಞೆಯನ್ನು ಮೂಡಿಸಬೇಕು. ಹೇಗೆಂದರೆ 'ಒಂದು ಜೀವಿಯನ್ನು ಸೃಷ್ಟಿಸಲೂ ಮನುಷ್ಯನಿಂದ ಸಾಧ್ಯವಿಲ್ಲದಿದ್ದಾಗ, 'ಒಂದು ಜೀವಿಯನ್ನು ಕೊಲ್ಲುವ ಹಕ್ಕು ಮನುಷ್ಯನಿಗೆ ಇಲ್ಲ' ಎಂಬ ಜಾಗೃತಿಯನ್ನು ಮಕ್ಕಳಲ್ಲಿ ಮೂಡಿಸಬೇಕು. ಈ ಮುಖಾಂತರ ಅವರ ಪೋಷಕರಿಗೆ ಪರಿಸರದ ಪ್ರಾಮುಖ್ಯತೆ ಬಗ್ಗೆ ಅರಿವು ಮೂಡಿಸಿ ಆ ಮುಖಾಂತರ ಮನೆಗೊಂದು ಮರ ಊರಿಗೊಂದು ವನ ಎಂಬ ವಾಕ್ಯವನ್ನು ಸಾಧಿಸುವ ದಿಸೆಯಲ್ಲಿ ಪ್ರಯತ್ನಿಸಬೇಕು.

ಶಿಕ್ಷಕರು ಮಕ್ಕಳಿಗೆ ಹೇಳುವ ಮೊದಲು ತಾವು ಅವರಿಗೆ ಮಾದರಿಯಾಗುವ ರೀತಿಯಲ್ಲಿ ಸ್ವಯಂ ಮರಗಳನ್ನು ನೆಟ್ಟು ಅದನ್ನು ಪೋಷಿಸುವ ಕಾರ್ಯವನ್ನು ನಿರ್ವಹಿಸಬೇಕಾಗಿರುತ್ತದೆ.

ಶಿಕ್ಷಕರು ವಿದ್ಯಾರ್ಥಿಗಳ ಮೂಲಕ ಅವರ ಪೋಷಕರಿಗೂ ಅರಣ್ಯ ಸಂಪತ್ತನ್ನು ಸಂರಕ್ಷಿಸುವ ಹೊಣೆ ಹಾಗೂ ವನ್ಯಜೀವಿ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಶಿಕ್ಷಕರೇ ಮಾಡಬಹುದು.

ಪೋಷಕರು ಮೊದಲು ತಮ್ಮ ಮನೆಗಳ ಮುಂದೆ ಒಂದೆರಡು ನೆರಳು ನೀಡುವ ಮರಗಳನ್ನು ಬೆಳೆಸಬೇಕು. ಹಾಗೆ ಹಳ್ಳಿಗಳ ಸುತ್ತಮುತ್ತ ತೋಪುಗಳ ನಿರ್ಮಾಣ ಮಾಡಬೇಕು. ಅಂದೇ ಕವಿವಾಣಿ " ಸುಜಲಾಂ, ಸುಫಲಾಂ, ಮಲಯಜ ಶೀಲತಾಂ ಸಸ್ಯಶ್ಯಾಮಲಾಂ ಮಾತರಂ" ಎಂಬ ಮಾತು ಸಾರ್ಥಕ ಆದೀತು. ●

## ಅಭಿನಂದನೆ



**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಲಕ್ಷ್ಮಣ್‌ರಾವ್‌ರವರ ಮೊಮ್ಮಗನಾದ ಕುಮಾರ ಆದಿತ್ಯ ಜಿ.ಹೆಚ್ S/o ಶ್ರೀ ಗಿರೀಶ್ ಬಿ.ಎಲ್ ಎಂಬ ವಿದ್ಯಾರ್ಥಿಯು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 99% ಅತ್ಯಧಿಕ ಅಂಕಗಳನ್ನು ಗಳಿಸಿದ್ದಾನೆ. ಗಣಿತ ಮತ್ತು ಜೀವಶಾಸ್ತ್ರದಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿರುತ್ತಾನೆ. ಆದಿತ್ಯ ಜಿ.ಹೆಚ್.ಗೆ ಅಭಿನಂದನೆಗಳು. ಇವನು ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಿ ಶ್ರೇಯೋಭಿವೃದ್ಧಿಯನ್ನು ಹೊಂದಲೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಆಶಿಸುತ್ತದೆ.**